ದಾವಣಗೆರೆ ನಗರವಾಣಿ
ಸುವರ್ಣ ಮಹೋತ್ಸವ ವರ್ಷದಲ್ಲಿ
53 ನೇ ವರ್ಷಕ್ಕೆ ಪಾದಾರ್ಪಣೆ
1973-2025

ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಕನ್ನಡ ದೈನಿಕ

# ದಾವಣಗೆರೆ ನಗರವಾಣಿ

ಸಂಸ್ಥಾಪಕ ಸಂಪಾದಕರು: ಸಿ.ಕೇಶವಮೂರ್ತಿ　ಪ್ರಧಾನ ಸಂಪಾದಕರು: ಡಾ|| ಸಿ.ಕೆ.ಜಯಂತ್　ಸಹ ಸಂಪಾದಕರು: ಬಿ.ಎನ್.ಮಲ್ಲೇಶ್

ಸಂಪುಟ: 53 ಸಂಚಿಕೆ: 247 DEVANGERE E nagaravani.com mail: dngrvani@gmail.com ರಿ.ನಂ.24916/73 KA/SK/DVG -012/2023-25 ಶುಕ್ರವಾರ, ಜನವರಿ 23, 2026 ದೂರವಾಣಿ: 08192-254186 ಬೆಲೆ: 3.00 ರೂ. ಪುಟಗಳು-4

ಏಳುಮಲೆ ಚಿತ್ರದ ನಟಿ ಪ್ರಿಯಾಂಕಾ ಆಚಾರ್, ತಮ್ಮ ಎರಡನೇ ಚಲನಚಿತ್ರಕ್ಕೆ ಸಹಿ ಹಾಕಿದ್ದಾರೆ. ಮಹಾನಟಿ ಕಾರ್ಯಕ್ರಮ ಗೆಲ್ಲುವ ಮೂಲಕ ಯುವ ನಟಿ ಮೊದಲು ಗಮನ ಸೆಳೆದರು. ಈಗ ರನ್ನ ಮತ್ತು ವಿಕ್ಟರಿ ಚಿತ್ರಗಳಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದ ಕಿರಣ್ ವಿಶ್ವನಾಥ್ ಅವರ ಚೊಚ್ಚಲ ನಿರ್ದೇಶನ ಚಿತ್ರದಲ್ಲಿ ನಟಿಸಿಲು ನಟಿ ಸಿದ್ಧರಾಗಿದ್ದಾರೆ.



### ರಾಜ್ಯಪಾಲರನ್ನು ತಡೆಯಲು ಯತ್ನಿಸಿದ ಬಿ.ಕೆ ಹರಿಪ್ರಸಾದ್

# ಗೌರ್ನರ್ ಭಾಷಣ; ಸದನ ರಣಾಂಗಣ



## ಕಾಂಗ್ರೆಸ್‌ನಿಂದ ರಾಜ್ಯಪಾಲರಿಗೆ ಅವಮಾನ: ಬಿಜೆಪಿ

ಬೆಂಗಳೂರು: ರಾಜ್ಯ ಸರ್ಕಾರವು ತನ್ನ ವೈಫಲ್ಯಗಳನ್ನು ಮುಚ್ಚಿ ಹಾಕಿಕೊಳ್ಳುವ ಸಲುವಾಗಿ ಕೇಂದ್ರ ಸರಕಾರದ ವಿರುದ್ಧ ದ್ವೇಷ ರಾಜಕಾರಣ ಮಾಡಲು ಸದನವನ್ನು ಬಳಸುತ್ತಿರುವುದು ಖಂಡಿತ ಸರಿಯಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ ವಿಜಯೇಂದ್ರ ಅವರು ಆಕ್ಷೇಪಿಸಿದ್ದಾರೆ.

ಗುರುವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಇವತ್ತು ಮಾತನಾಡಿದ್ದಾರೆ. ಆದರೆ, ಸದನದ ಒಳಗಡೆ ಗೌರವಾನ್ವಿತ ರಾಜ್ಯಪಾಲರಿಗೆ ಅಗೌರವ ಸೂಚಿಸುವ ಕೆಲಸವನ್ನು ಆಡಳಿತ ಪಕ್ಷದವರು ಮಾಡಿದ್ದು ಖಂಡನಾರ್ಹ ಎಂದು ತಿಳಿಸಿದರು. (3ನೇ ಪುಟಕ್ಕೆ)

ಬೆಂಗಳೂರು: ಕರ್ನಾಟಕ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಪೂರ್ಣವಾಗಿ ಓದಲು ನಿರಾಕರಿಸಿದ್ದಾರೆ. ಕರ್ನಾಟಕದ ರಾಜಕೀಯ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಇಂತದ್ದೊಂದು ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಯಾಗಿದ್ದು, ರಾಜ್ಯಪಾಲ ಮತ್ತು ಕರ್ನಾಟಕ ಸರ್ಕಾರ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಮಧ್ಯೆ ರಾಜ್ಯಪಾಲರು ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಕೇವಲ ಎರಡು ನಿಮಿಷ ಭಾಷಣ ಮಾಡಿ ಹೊರಟು ನಿಂತಾಗ, ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯ ಬಿಕೆ ಹರಿಪ್ರಸಾದ್ ಅವರು, ರಾಜ್ಯಪಾಲರನ್ನುತಡೆಯಲು ಯತ್ನಿಸಿದ್ದಾರೆ. ರಾಜ್ಯಪಾಲರು ಎಲ್ಲಾ ಸದಸ್ಯರಿಗೆ ವಂದಿಸುತ್ತಾ ಹೊರ ನಡೆಯುತ್ತಿದ್ದಂತೇ ಎದುರಿಗೆ ನಿಂತ ಬಿಕೆ ಹರಿಪ್ರಸಾದ್, ರಾಜ್ಯಪಾಲರ ನಡೆಯನ್ನು ತೀವ್ರವಾಗಿ ಖಂಡಿಸಿದರು.

ರಾಜ್ಯಪಾಲರು ಭಾಷಣ ಪೀಠದಿಂದ ಕೆಳಗಿಳಿದು ಬಂದಾಗ, ವಿಧಾನ ಪರಿಷತ್ ಸದಸ್ಯ ಬಿ.ಕೆ ಹರಿಪ್ರಸಾದ್ ನೇತೃತ್ವದಲ್ಲಿ ಕಾಂಗ್ರೆಸ್ ಶಾಸಕರು ರಾಜ್ಯಪಾಲರಿಗೆ ಧಿಕ್ಕಾರ ಕೂಗಿ, ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅವರನ್ನು ಅಡ್ಡಗಟ್ಟಿ ಭಾಷಣ ಓದುವಂತೆ ಕೇಳಿಕೊಂಡರು.

ಕರ್ನಾಟಕವಿಧಾನಸಭೆಜಂಟಿಅಧಿವೇಶನಉದ್ದೇಶಿಸಿ ಭಾಷಣ ಮಾಡಲು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ನಿರಾಕರಿಸಿದ್ದರು. ಈ ಬಗ್ಗೆ ಸರ್ಕಾರದ ಸಚಿವರು ಕಿಡಿ ಕಾರಿದ್ದರು. ಸರ್ಕಾರ ಬರೆದುಕೊಟ್ಟ ಭಾಷಣ ಬದಲು ಇಂದು ಅವರೇ ಭಾಷಣ ಬರೆದುಕೊಂಡು ಬಂದು ಓದುತ್ತಾರೆ ಎಂದು ಹೇಳಲಾಗಿತ್ತು. ಆದರೆ ಅದನ್ನು ಕೂಡ ಓದದೆ ಇಂದು ರಾಜ್ಯಪಾಲರು ನಿರ್ಗಮಿಸಿದ್ದಾರೆ.

ಇದಕ್ಕೆ ಆಡಳಿತ ಪಕ್ಷದ ಶಾಸಕರು ತೀವ್ರ ವಿರೋಧ ವ್ಯಕ್ತಪಡಿಸಿ ಘೋಷಣೆಗಳನ್ನು ಕೂಗಿದರು. ಈ ಸಂದರ್ಭದಲ್ಲಿ ವಿಧಾನಸಭೆ ಹೈಡ್ರಾಮಾಕ್ಕೆ ಸಾಕ್ಷಿಯಾಯಿತು.

(3ನೇ ಪುಟಕ್ಕೆ)



## ಸುಪ್ರೀಂ ಕೋರ್ಟ್ ಮೊರೆ ಹೋಗಲು ಪರಿಶೀಲನೆ: ಸಿಎಂ ಸಿದ್ದರಾಮಯ್ಯ

ಬೆಂಗಳೂರು:ರಾಜ್ಯಪಾಲರುಸರ್ಕಾರದಭಾಷಣವನ್ನಲ್ಲ,ತಮ್ಮದೇ ಭಾಷಣದ ಒಂದು ವಾಕ್ಯವನ್ನು ಓದಿದರು. ಇದು ಪ್ರತಿನಿಧಿ ಸಭೆಗೆ ಮಾಡಿದ ಅವಮಾನ ಎಂದು ಸಿಎಂ ಸಿದ್ದರಾಮಯ್ಯ ಕಿಡಿ ಕಾರಿದ್ದಾರೆ.

ಸಚಿವ ಸಂಪುಟ ಸಿದ್ಧಪಡಿಸಿದ ಭಾಷಣವನ್ನು ಮಾತನಾಡುವ ಬದಲು, ಅವರು ಸ್ವತಃ ಸಿದ್ಧಪಡಿಸಿದ ಭಾಷಣವನ್ನು ಮಾಡಿದ್ದಾರೆ, ಇದು ಭಾರತೀಯ ಸಂವಿಧಾನದ ನಿಬಂಧನೆಗಳಿಗೆ ವಿರುದ್ಧವಾಗಿದೆ. ಇದು ಭಾರತೀಯ ಸಂವಿಧಾನದ 176 ಮತ್ತು 163 ನೇ ವಿಧಿಯನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತದೆ.ರಾಜ್ಯಪಾಲರ ವರ್ತನೆಯ ವಿರುದ್ಧ ನಾವು ಪ್ರತಿಭಟಿಸಲಿದ್ದೇವೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

(3ನೇ ಪುಟಕ್ಕೆ)

## ಜಗಳೂರು ತಾ|| ಶಾಲಾ ಕಟ್ಟಡಗಳ ದುರಸ್ಥಿಗಾಗಿ ಶೀಘ್ರದಲ್ಲಿ 10 ಕೋಟಿ ರೂ ಬಿಡುಗಡೆ: ಶಾಸಕ




ದಾ. ನಗರವಾಣಿ ಸುದ್ದಿ

ಜಗಳೂರು, ಜ.22: ಶೀಘ್ರದಲ್ಲಿಯೇ ರೂ.10 ಕೋಟಿ ಅನುದಾನ ತಂದು ತಾಲ್ಲೂಕಿನ ಸರ್ಕಾರಿ ಶಾಲಾ ಕಟ್ಟಡಗಳ ದುರಸ್ಥಿಗೊಳಿಸಲಾಗುವುದು ಎಂದು ಶಾಸಕ ಬಿ.ದೇವೇಂದ್ರಪ್ಪ ಭರವಸೆ ನೀಡಿದರು.

ತಾಲ್ಲೂಕಿನ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಶಿಥಿಲಾವಸ್ಥೆಯಲ್ಲಿನ ಶಾಲಾ ಕೊಠಡಿಗಳನ್ನು ವೀಕ್ಷಿಸಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಬಹುತೇಕ ಕಟ್ಟಡಗಳು ದುರಸ್ಥಿ ಹಂತ ತಲುಪಿದ್ದು ಅಗತ್ಯವಿದ್ದಲ್ಲಿ ಹೊಸ ಕೊಠಡಿಗಳ ನಿರ್ಮಾಣಗೊಳಿಸಲಾಗುವುದು. ಎಸ್ ಡಿ ಎಂಸಿ ಅಧ್ಯಕ್ಷರು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಗುಣಮಟ್ಟದ ಕಾಮಗಾರಿ ನಡೆಸಲು ಕಾಳಜಿ ವಹಿಸಬೇಕು ಎಂದರು. (3ನೇ ಪುಟಕ್ಕೆ)

## ಇಂದಿನಿಂದ ದುಗ್ಗಮ್ಮನ ಜಾತ್ರೆ ಡಬ್ಬಿಗಡಿಗೆ ಮನೆ ಬಾಗಿಲಿಗೆ

ದಾವಣಗೆರೆ: ಫೆಬ್ರವರಿಯಲ್ಲಿ ನಡೆಯುವ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಜ.23ರಿಂದ 10-30ಕ್ಕೆ ಪದ್ಧತಿ ಪ್ರಕಾರ ಡಬ್ಬಿ ಗಡಿಗೆಯು ಪ್ರತಿಮನೆ ಬಾಗಿಲಿಗೆ ಬರಲಿದ್ದು, ಭಕ್ತಾದಿಗಳು ಕಾಣಿಕೆಯನ್ನು ಹಾಕಿ ಭಕ್ತಿ ಸಮರ್ಪಿಸುವಂತೆ ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್ ತಿಳಿಸಿದೆ.

ಪ್ರತಿ ದಿನ ವಾಲಗ, ಭಜಂತ್ರಿ ಮೂಲಕ ಗೌಡರು, ಶಾನುಭೋಗರು, ರೈತರು, ಬಣಕಾರರು, ಕುಂಬಾರರು, ತಳವಾರರು, ಬಡಗಿಯವರು, ಮಡಿವಾಳರು ಎಲ್ಲಾ ಬಾಬುದಾರರ ಜೊತೆಯಲ್ಲಿ ಡಬ್ಬಿ ಗಡಿಗೆಯು ಪ್ರತಿಯೊಬ್ಬರ ಮನೆಯ ಬಾಗಿಲಿಗೆ ಬರುತ್ತದೆ. ಸಮಸ್ತ ಭಕ್ತಾದಿಗಳು ತಮ್ಮ ಶಕ್ತಾನುಸಾರ ಕಾಣಿಕೆಯನ್ನು ಶ್ರೀ ದೇವಿಯ ಡಬ್ಬಿಗೆ ಹಾಕಿ ದೇವಿಯ ಕೃಪೆಗೆ ಪಾತ್ರರಾಗುವಂತೆ ವಿನಂತಿಸಿದೆ.

## ಹರಿಹರದಲ್ಲಿ ಎಸ್ಸಿ-ಎಸ್ಟಿ ಕುಂದು ಕೊರತೆ ಸಭೆ ಅಕ್ರಮ ಮದ್ಯ ಮಾರಾಟ, ಜೂಜಾಟದ ಪ್ರತಿಧ್ವನಿ



ದಾ ನಗರವಾಣಿ ಸುದ್ದಿ

ಹರಿಹರ: ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಅಕ್ರಮ ಮದ್ಯ ಮಾರಾಟ ಮತ್ತು ಜೂಜಾಟವನ್ನು ತಡೆಯಬೇಕೆಂದು ನಗರದ ಗುರುಭವನದಲ್ಲಿ ಗುರುವಾರ ಪೊಲೀಸ್ ಇಲಾಖೆಯಿಂದ ಆಯೋಜಿಸಿದ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಕುಂದು ಕೊರತೆ ಸಭೆಯಲ್ಲಿ ಸಮುದಾಯದ ಮುಖಂಡರು ಆಗ್ರಹಿಸಿದರು.

ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟ ವ್ಯಾಪಕವಾಗಿದೆ. ಅಂಗಡಿ, ಹೋಟಲ್, ಮನೆಗಳಲ್ಲಿ ಮದ್ಯ ಮಾರಾಟ ನಡೆಯುತ್ತಿದೆ. ಇದೇ ಮಾದರಿಯಲ್ಲಿ ಮಟ್ಕಾ ಜೂಜಾಟದ ಅರ್ಭಟವೂ ಇದೆ.

ಮದ್ಯ ಮತ್ತು ಮಟ್ಕಾದ ವ್ಯಸನಕ್ಕೆ ಈಡಾಗಿರುವ ಪರಿಶಿಷ್ಟ ಹಾಗೂ ಇತರೆ ಸಮುದಾಯದ ಯುವಕರ ಬದುಕು ಬರಡಾಗುತ್ತಿದೆ, ಕುಟುಂಬದವರು ಉಪವಾಸಕ್ಕೆ ಈಡಾಗುತ್ತಿದ್ದಾರೆ. ಈ ಜ್ವಲಂತ ಸಮಸ್ಯೆ ನಿವಾರಣೆ ಮಾಡಬೇಕೆಂದು ಸಮುದಾಯದ ಹಲವು ಮುಖಂಡರು ಮಾತನಾಡಿ ಅಧಿಕಾರಿಗಳಿಗೆ ಆಗ್ರಹಿಸಿದರು.

ಈ ಸಭೆಯಲ್ಲಿ ಬಹುತೇಕ ಇಲಾಖೆ ಅಧಿಕಾರಿಗಳು ಗೈರಾಗಿದ್ದಾರೆ. ಈ ಸಭೆ ಕಾಟಾಚಾರಕ್ಕೆ ನಡೆಸಲಾಗುತ್ತಿದೆ, ಕಾನೂನಿನ ಬೆಂಬಲ ಇದ್ದರೂ ಅಸ್ಪೃಶ್ಯರ ನಿರೀಕ್ಷಿತ ಅಭಿವೃದ್ಧಿ ಆಗುತ್ತಿಲ್ಲ ಎಂದು ಮುಖಂಡ ವಿಶ್ವನಾಥ ಮೈಲಾಳ ಆರೋಪಿಸಿದರು.

ಕಡ್ಲೆಗೊಂದಿ ಗ್ರಾಮದಲ್ಲಿ ಲಭ್ಯವಿರುವ ಸರ್ಕಾರಿ ಜಮೀನಿನಲ್ಲಿ ಗ್ರಾಮದ ನಿರ್ವಸತಿಕರಿಗೆ ವಸತಿ ಯೋಜನೆ ರೂಪಿಸಬೇಕು, (3ನೇ ಪುಟಕ್ಕೆ)

## ಹರೀಶ್ ವರ್ತನೆ ಖಂಡಿಸಿ 24ಕ್ಕೆ ಹರಿಹರದಲ್ಲಿ ಪ್ರತಿಭಟನೆ: ಶೆಟ್ಟಿ



ದಾ ನಗರವಾಣಿ ಸುದ್ದಿ

ದಾವಣಗೆರೆ.ಜ.22: ಜಿಲ್ಲೆಯ ಅಧಿಕಾರಿಗಳ ಬಗ್ಗೆ ಹಗುರವಾಗಿ ಮಾತನಾಡಿ, ಅವರ ಮೇಲೆ ದರ್ಪ ತೋರಿಸುತ್ತಿರುವ ಹಾಗೂ ದ್ವೇಷದ ರಾಜಕೀಯ ಮಾಡುತ್ತಿರುವ ಹರಿಹರ ಬಿಜೆಪಿ ಶಾಸಕ ಬಿ.ಪಿ.ಹರೀಶ್ ಹಾಗೂ ಅವರ ಪಕ್ಷದ ಮುಖಂಡರ ನಡೆಯನ್ನು ಖಂಡಿಸಿ ಇದೇ ಜ.24 ರಂದು ಹರಿಹರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ದೂಡ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಘಂಟೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಬಯಲು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಹೆಚ್.ಬಿ.ಮಂಜಪ್ಪನವರ ನೇತೃತ್ವದಲ್ಲಿ ಹರಿಹರದ ಶ್ರೀ ಫಕ್ಕೀರಸ್ವಾಮಿ ಮಠದಿಂದ ಪ್ರತಿಭಟನಾ ಮೆರವಣಿಗೆ ಪ್ರಾರಂಭವಾಗಿ ಗಾಂಧಿ ಸರ್ಕಲ್‌ವರೆಗೆ ಮುಕ್ತಾಯಗೊಳ್ಳಲಿದೆ ಎಂದರು.

ಈ ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಪಕ್ಷದ ಮುಖಂಡರು, ಶಾಸಕರು, ಮಾಜಿ ಶಾಸಕರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳು ಭಾಗವಹಿಸುವರು. ಆದ ಕಾರಣ ಜಿಲ್ಲೆಯ ಎಲ್ಲಾ ಘಟಕಗಳ ಪದಾಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಪಕ್ಷದ ಅಭಿಮಾನಿಗಳು ಈ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು.

(3ನೇ ಪುಟಕ್ಕೆ)

## ಸಿಎಂ ಖುರ್ಚಿ ಗುದ್ದಾಟ: 'ನಮ್ಮ ನಾಯಕರು ನನ್ನ ಕೈಬಿಡುವುದಿಲ್ಲ' : ಡಿ.ಕೆ ಶಿವಕುಮಾರ್

ದಾವೋಸ್: ರಾಜ್ಯದಲ್ಲಿ ಮುಖ್ಯಮಂತ್ರಿ ಖುರ್ಚಿ ಕಾದಾಟ ಮುಂದುವರೆದಿದ್ದು, ತಮ್ಮ ನಾಯಕರು ನನ್ನನ್ನು ನಿರಾಸೆಗೊಳಿಸುವುದಿಲ್ಲ ಎಂಬ ಭರವಸೆಯಲ್ಲಿರುವುದಾಗಿ ಉಪಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಹೇಳಿದ್ದಾರೆ.

ಸ್ವಿಟ್ಜರ್‌ಲೆಂಡ್‌ನ ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ ಶಿವಕುಮಾರ್ ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದಾರೆ. ಎನ್‌ಡಿಟಿವಿಯ ಸಿಇಒ ಮತ್ತು ಪ್ರಧಾನ ಸಂಪಾದಕ ರಾಹುಲ್ ಕನ್ವಾಲ್ ಅವರೊಂದಿಗಿನ ವಿಶೇಷ ಸಂದರ್ಶನದಲ್ಲಿ, ಮುಖ್ಯಮಂತ್ರಿ ಹುದ್ದೆಗಾಗಿ ನಡೆಯುತ್ತಿರುವ ಜಗಳದ ಬಗ್ಗೆ ಕೇಳಿದ್ದಕ್ಕೆ ಉತ್ತರಿಸಿದ್ದಾರೆ.

'ನನ್ನ ನಾಯಕರು ಈ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತಾರೆ. ಇದು ಮಾಧ್ಯಮಗಳೊಂದಿಗೆ ಚರ್ಚಿಸುವ ವಿಷಯವಲ್ಲ; ಇದು ತೆರೆಮರೆಯಲ್ಲಿ ನಡೆಯಬೇಕಾದ ಚರ್ಚೆ. (3ನೇ ಪುಟಕ್ಕೆ)

## 5 ದಿನಗಳ ಬ್ಯಾಂಕಿಂಗ್ ವ್ಯವಸ್ಥೆ ಜಾರಿಗೆ ಬ್ಯಾಂಕ್ ನೌಕರರ ಒತ್ತಾಯ, ಪ್ರತಿಭಟನೆ

ದಾ ನಗರವಾಣಿ ಸುದ್ದಿ


ದಾವಣಗೆರೆ: 5 ದಿನಗಳ ಬ್ಯಾಂಕಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲೇಬೇಕು ಎಂದು ಕೇಂದ್ರ ಸರಕಾರ ಮತ್ತು ಹಣಕಾಸು ಸಚಿವಾಲಯವನ್ನು ಒತ್ತಾಯಿಸಿ ಬ್ಯಾಂಕ್ ನೌಕರರು ಹಾಗೂ ಅಧಿಕಾರಿಗಳು ಇಂದು ದೇಶದಾದ್ಯಂತ ಪ್ರತಿಭಟನಾ ಮತ ಪ್ರದರ್ಶನವನ್ನು ನಡೆಸಿದರು.

ಬ್ಯಾಂಕ್ ಕಾರ್ಮಿಕ ಸಂಘಗಳ ಸಂಯುಕ್ತ ವೇದಿಕೆಯು ನೀಡಿದ ಕರೆಯ ಮೇರೆಗೆ ಇಂದು ದಾವಣಗೆರೆಯಲ್ಲಿ ಯುಎಫ್‌ಬಿಯು ದಾವಣಗೆರೆ ಜಿಲ್ಲಾ ಘಟಕದ ನೇತೃತ್ವದಲ್ಲಿ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ದಾವಣಗೆರೆ ಮಂಡಿಪೇಟೆಯ ಕೆನರಾ ಬ್ಯಾಂಕ್ ಮುಂಭಾಗ ಮತ ಪ್ರದರ್ಶನವನ್ನು ನಡೆಸಿ ಹಕ್ಕೊತ್ತಾಯ ಮಾಡಿದರು.

ಯುಎಫ್‌ಬಿಯು ದಾವಣಗೆರೆ ಜಿಲ್ಲಾ ಸಂಚಾಲಕ ಕೆ.ರಾಘವೇಂದ್ರ ನಾಯರಿ ಮಾತನಾಡಿ ಬ್ಯಾಂಕ್ ಉದ್ಯೋಗಿಗಳ 5 ದಿನಗಳ ಬ್ಯಾಂಕಿಂಗ್ ಪದ್ಧತಿ ಜಾರಿಗೆ ಬರಬೇಕು ಎನ್ನುವ ಬೇಡಿಕೆಯ ಕುರಿತಾಗಿ ಈಗಾಗಲೇ ಐಬಿಎ ಹಾಗೂ ಬ್ಯಾಂಕ್ ಕಾರ್ಮಿಕ ಸಂಘಗಳ ನಡುವೆ ದಿನಾಂಕ 08.03.2024 ರಂದು ಒಪ್ಪಂದವಾಗಿ (4ನೇ ಪುಟಕ್ಕೆ)




## 200 ಅಡಿ ಆಳದ ಕಮರಿಗೆ ಉರುಳಿಬಿದ್ದ ಸೇನಾ ವಾಹನ; 10 ಸೈನಿಕರು ಹುತಾತ್ಮ



ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಗುರುವಾರ ಶಸ್ತ್ರಸಜ್ಜಿತ ಸೇನಾ ವಾಹನವು ಸ್ಕಿಡ್ ಆಗಿ 200 ಅಡಿ ಆಳದ ಕಮರಿಗೆ ಉರುಳಿದ ಪರಿಣಾಮ ಹತ್ತು ಮಂದಿ ಸಿಬ್ಬಂದಿ ಸಾವಿಗೀಡಾಗಿದ್ದಾರೆ ಮತ್ತು 7 ಮಂದಿ ಗಾಯಗೊಂಡಿದ್ದಾರೆ.

ಒಟ್ಟು 17 ಜನರಿದ್ದ ಸೇನಾ ವಾಹನವು ಎತ್ತರದ ಪೋಸ್ಟ್‌ಗೆ ಹೋಗುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ಭದೇರ್ವಾ-ಚಂಬಾ ರಸ್ತೆಯ ಖನ್ನಿ ಟಾಪ್‌ನಲ್ಲಿರುವ 200 ಅಡಿ ಆಳದ ಕಮರಿಗೆ ಉರುಳಿ ಬಿದ್ದಿದೆ.

ಅಪಘಾತ ಸಂಭವಿಸಿದ ತಕ್ಷಣ ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಿದ ಸೇನೆ, ಪೊಲೀಸರು ಮತ್ತು ಸ್ಥಳೀಯ ನಿವಾಸಿಗಳು ಗಾಯಗೊಂಡ ಸೈನಿಕರನ್ನು ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ.

(3ನೇ ಪುಟಕ್ಕೆ)

## ಮಣಿಪುರ: ಶಾಂತಿಗೆ ಮತ್ತೆ ಭಂಗ, ಮೆಯ್ಟೀ ವ್ಯಕ್ತಿಗೆ ಗುಂಡಿಕ್ಕಿ ಹತ್ಯೆ!

ಗುವಾಹಟಿ: ಮಣಿಪುರದಲ್ಲಿ ಸ್ವಲ್ಪ ದಿನಗಳಿಂದ ತಣ್ಣಗಾಗಿದ್ದ ಶಾಂತಿಗೆ ಮತ್ತೆ ಭಂಗ ತರಲಾಗಿದೆ. ಚುರಾಚಂದ್‌ಪುರ ಜಿಲ್ಲೆಯಲ್ಲಿ ಶಂಕಿತ ಕುಕಿ ಉಗ್ರರು ಮೆಯ್ಟೀ ವ್ಯಕ್ತಿಯ ಅಪಹರಿಸಿ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಜನಾಂಗೀಯ ಹಿಂಸಾಚಾರದಿಂದ ತತ್ತರಿಸಿದ್ದ ರಾಜ್ಯದಲ್ಲಿ ಕಳೆದ ಕೆಲವು ತಿಂಗಳುಗಳಿಂದ ಇಂತಹ ಘಟನೆ ವರದಿಯಾಗಿರಲಿಲ್ಲ. ಕಳೆದ ವರ್ಷ ಫೆಬ್ರವರಿ 13 ರಿಂದ ರಾಷ್ಟ್ರಪತಿ ಆಳ್ವಿಕೆಯಲ್ಲಿರುವ ರಾಜ್ಯದಲ್ಲಿ ಸರ್ಕಾರ ರಚನೆಯ ಸಾಧ್ಯತೆಯ ಬಗ್ಗೆ ಊಹಾಪೋಹಗಳು ಹೆಚ್ಚಾಗುತ್ತಿರುವಂತೆಯೇ ಈ ಘಟನೆ ನಡೆದಿದೆ.

ವರದಿಗಳ ಪ್ರಕಾರ, ಮೃತ ವ್ಯಕ್ತಿಯನ್ನು ಮಾಯಂಗ್ಲಂಬಮ್ ರಿಷಿಕಾಂತ ಸಿಂಗ್ ಎಂದು ಗುರುತಿಸಲಾಗಿದೆ. ಆತನ ಕುಕಿ ಪತ್ನಿ ಚಿಂಗ್ನು ಹಾಕಿಪ್ ಅವರೊಂದಿಗೆ ಬುಧವಾರ ಚುರಾಚಂದ್‌ಪುರ ಜಿಲ್ಲೆಯ ತುಬಾಂಗ್ ಪ್ರದೇಶದಲ್ಲಿನ ಅವರ ಮನೆಯಿಂದ ಅಪಹರಿಸಲಾಗಿದೆ. ನಂತರ ಆತನನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದ್ದು, ಮಹಿಳೆಯನ್ನು ಬಿಟ್ಟು ಕಳುಹಿಸಲಾಗಿದೆ. ಈ ವ್ಯಕ್ತಿ ಮೂಲತಃ ಇಂಫಾಲ್ ಕಣಿವೆಯ ಕಕ್ಚಿಂಗ್ ಖುನೌ ಮೂಲದವರಾಗಿದ್ದಾರೆ.

|| ಶ್ರೀ ಗುರು ಕಾರಡಗಿ ವೀರಭದ್ರೇಶ್ವರ ಪ್ರಸನ್ನ ||

ಅನೇ ವಾರ್ಷಿಕ ಪುಣ್ಯ ಸ್ಮರಣೋತ್ಸವ



ಅಂಗೋದ್ಭವ 17.02.1953

ಅಂಗೈಕ್ಯ 23.01.2017

ದಿ|| ಕುಂ|| ಸೌ|| ಶ್ರೀಮತಿ ಕೆ.ಸಿ. ಸೌಭಾಗ್ಯಮ್ಮ

ಕರ್ಮಯೋಗಿಯ ಬದುಕು ಅವರನ್ನು ಆತ್ಮದೊಂದಿಗೆ ಜೋಡಿಸುತ್ತದೆ,
ಇದು ಈಶನಲ್ಲಿ ಐಕ್ಯವಾಗಲು ಮಾರ್ಗ ತೋರುತ್ತದೆ (ಭಗವದ್ ಗೀತೆಯ ಸಾರ)

ಜನನ ಮರಣದ ಮಧ್ಯದಲ್ಲಿ ಬದುಕನ್ನು ಬಂಗಾರವಾಗಿಸಿ ಜೀವನವನ್ನು ಸಿಹಿ ಜೇನಾಗಿಸಿದ ನೀವು ನಮ್ಮಿಂದ ನಿಮ್ಮ ಕಾಯ ಕಣ್ಮರೆಯಾಗಿ ನವ ವಸಂತಗಳು ಗತಿಸಿದವು. ಶರೀರ ಅಂತ್ಯವಾದರೂ ನಿಮ್ಮ ನಿತ್ಯ ನಡೆ-ನುಡಿ, ಆಚಾರ-ವಿಚಾರ, ಪ್ರೀತಿ-ವಾತ್ಸಲ್ಯಗಳು ಎಲ್ಲಾ ರೀತಿಯ ಬದುಕಿನ ಮೌಲ್ಯಗಳನ್ನು ತಾವು ರೂಪಿಸಿದ್ದೀರಿ. ನಿಮ್ಮ ಪವಿತ್ರ ಆತ್ಮಕ್ಕೆ ದಯಾಮಯನಾದ ಮೃತ್ಯುಂಜಯನು ಸದಾ ಚಿರಶಾಂತಿಯನ್ನು ಕಲ್ಪಿಸಲೆಂದು ನಮ್ಮಗಳ ಆತ್ಮಪೂರ್ವಕ ಪ್ರಾರ್ಥನೆ.

ಇಂತಿ ದುಃಖತಪ್ತರು : ಪತಿ: - ಕೆ.ಎಸ್. ಚನ್ನವೀರಯ್ಯ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಕಿತ್ತೂರು ಮಠದ ಬಂಧುಗಳು ಹಾಗು ಮಿತ್ರರು.

ಮೊ: 7022779716, 9844002785, 9500027489

ವಿ.ಸೂ : ಶ್ರೀಮತಿಯವರ ಸ್ಮರಣಾರ್ಥವಾಗಿ 23.01.2026 ಶುಕ್ರವಾರ ಹಾವೇರಿ ಜಿಲ್ಲಾ ಬ್ಯಾಡಗಿ ತಾಲ್ಲೂಕು ಕದರಮಂಡಲಗಿ ಶ್ರೀ ಕಾಂತೇಶ್ವರ ಮಹಾಸ್ವಾಮಿ ಸನ್ನಿಧಿಯಲ್ಲಿ ಅಪರಾಹ್ನ 12.30 ರಿಂದ ಅನ್ನ ದಾಸೋಹವಿದೆ.

ಸರ್ವರಿಗೂ ಆದರದ ಸುಸ್ವಾಗತ

# ಸಿನಿಮಾ ಸಿಂಚನ



'ಲ್ಯಾಂಡ್ ಲಾರ್ಡ್'
ದುನಿಯಾ ವಿಜಯ್


'ಲ್ಯಾಂಡ್ ಲಾರ್ಡ್'
ರಚಿತಾ ರಾಮ್

## ಇಂದು ಆ್ಯಕ್ಷನ್, ಫ್ಯಾಮಿಲಿ ಡ್ರಾಮಾ 'ಲ್ಯಾಂಡ್ ಲಾರ್ಡ್' ತೆರೆಗೆ

ದುನಿಯಾ ವಿಜಯ್, ರಚಿತಾ ರಾಮ್ ಅಭಿನಯದ 'ಲ್ಯಾಂಡ್ ಲಾರ್ಡ್' ಇಂದು (ಜ.23) ರಾಜ್ಯಾದ್ಯಂತ ದೊಡ್ಡ ಮಟ್ಟದಲ್ಲಿ ತೆರೆಗೆ ಬರುತ್ತಿದೆ. ಸಾರಥಿ ಫಿಲ್ಮ ಬ್ಯಾನರ್‌ನಲ್ಲಿ ಚಿತ್ರವನ್ನು ಹೇಮಂತ್ ಗೌಡ ಕೆ.ಎಸ್ ಹಾಗೂ ಕೆ.ವಿ. ಸತ್ಯಪ್ರಕಾಶ್ ನಿರ್ಮಾಣ ಮಾಡಿದ್ದಾರೆ. ಇದು ಆಳಿದವರ ಕಥೆಯಲ್ಲ, ಅಳಿದು ಉಳಿದವರ ಕಥೆ ಎಂಬ ಅಡಿಬರಹವಿರುವ ಈ ಚಿತ್ರವನ್ನು ಕನ್ನಡ ಚಿತ್ರರಂಗದ ಯಶಸ್ವಿ ಕತೆಗಾರ ಜಡೇಶ್ ಕೆ. ಹಂಪಿ ನಿರ್ದೇಶನ ಮಾಡಿದ್ದಾರೆ. ಚಿತ್ರದ ಟ್ರೇಲರ್ ನೋಡಿದಾಗ ಇದೊಂದು ಭೂಮಾಲೀಕರ ತುಳಿತಕ್ಕೆ ಒಳಗಾದವರ ಕಥ ಒಳಗೊಂಡಿರುವುದು ಗೊತ್ತಾಗುತ್ತಿದೆ. ಜಡೇಶ್ ಅವರ ನೆಚ್ಚಿನ ಜಾನರ್ ಇದಾಗಿದ್ದು, ಈ ಹಿಂದೆ ಜಡೇಶ್ ಅವರೇ ಕತೆ ಬರೆದಿದ್ದ 'ಕಾಟೇರ' ಸಿನಿಮಾದ ಕತೆಯೂ ಇದೇ ಮಾದರಿಯದ್ದಾಗಿ-ತ್ತು.

'ಲ್ಯಾಂಡ್ ಲಾರ್ಡ್' ಸಿನಿಮಾ ಹೆಸರೇ ಸೂಚಿಸುತ್ತಿರುವಂತೆ ಭೂಮಾಲಿಕರ ದರ್ಪದ ಕತೆ. ಜೀತದಾಳುಗಳ ನೋವಿನ ಕತೆ. ದುನಿಯಾ ವಿಜಯ್ ಅವರು ತಮ್ಮ ಇತರೆ ಕೆಲ ಸಿನಿಮಾಗಳಿಗಿಂತಲೂ ಭಿನ್ನವಾದ ರೀತಿಯ ಪಾತ್ರದಲ್ಲಿ ನಟಿಸಿದ್ದಾರೆ. ದುನಿಯಾ ವಿಜಯ್ ಇಲ್ಲಿ ವಯಸ್ಸಾದ ವ್ಯಕ್ತಿಯ ಪಾತ್ರದಲ್ಲಿ ನಟಿಸಿದ್ದಾರೆ ಆದರೆ ಸಿನಿಮಾಕ್ಕೆ ಅವರೇ ನಾಯಕ. ಅಮಾನವೀಯ, ಅಹಂಕಾರಿ ಭೂಮಾಲೀಕನ ಪಾತ್ರದಲ್ಲಿ ರಾಜ್ ಬಿ ಶೆಟ್ಟಿ ನಟಿಸಿದ್ದು, ರಾಜ್ ವಿಲನ್ ಆಗಿಯೂ ಸಖತ್ ಗಮನ ಸೆಳೆದಿರುವುದು ಟ್ರೇಲರ್‌ನಲ್ಲಿಯೇ ತಿಳಿದಿದೆ. ಟ್ರೇಲರ್‌ನಲ್ಲಿ ಭೂಮಾಲೀಕರ ದೌರ್ಜನ್ಯಕ್ಕೆ ಒಳಗಾಗುವ ಕುಟುಂಬವೊಂದು ಅದನ್ನು ಮೆಟ್ಟಿ ನಿಲ್ಲುವ ಜೊತೆಗೆ ತಮ್ಮಂತೆ ಸಂತ್ರಸ್ತರಾದವರಲ್ಲಿ ಶಕ್ತಿ, ಮಾಹಿತಿ ತುಂಬುವ ಕತೆಯಿಂಬೆದು ತಿಳಿಯುತ್ತದೆ. ಸಿನಿಮಾನಲ್ಲಿ ವಿಜಯ್ ಪುತ್ರಿ ರಿತನ್ಯ ಅವರು ನಟಿಸಿದ್ದು, ಪೊಲೀಸ್ ಕಾನ್‌ಸ್ಟೇಬಲ್ ಪಾತ್ರದಲ್ಲಿ ಅವರು ಕಾಣಿಸಿಕೊಂಡಿದ್ದಾರೆ. ಯುವ ನಟ ಶಿಶಿರ್ ಬೈಕಾಡಿ ಪಾತ್ರವೂ ಗಮನ ಸೆಳೆಯುತ್ತಿದೆ. ರಾಕೇಶ್ ಅಡಿಗ ಸಹ ಸಖತ್ ವಿಲನಿಶ್ ಆಗಿ ಕಾಣಿಸಿಕೊಂಡಿದ್ದಾರೆ. ನಟಿ ರಚಿತಾ ರಾಮ್ ಪಾತ್ರವೂ ಖಡಕ್ ಆಗಿದೆ.

ಈಗಾಗಲೇ ಹಾಡು, ಟೀಸರ್, ಟ್ರೇಲರ್‌ನಿಂದ ಲ್ಯಾಂಡ್ ಲಾರ್ಡ್ ಈವಾರ ತೆರೆಗೆ ಬರುತ್ತಿರುವ ಬಹು ನಿರೀಕ್ಷಿತ ಸಿನಿಮಾ ಆಗಿದೆ. ಒಟ್ಟಾರೆಯಾಗಿ ಜಡೇಶ ಅವರು ದಮನಿತರ ಸಿಟ್ಟಿನ ಕತೆಯನ್ನು ಆಕ್ಷನ್ ಲೇಪದೊಂದಿಗೆ ತೆರೆಗೆ ತಂದಿರುವುದು ತಿಳಿದು ಬರುತ್ತಿದೆ. ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ, ಸ್ವಾಮಿ ಜೆ ಗೌಡ ಛಾಯಾಗ್ರಹಣ, ಮಾಸ್ತಿ ಉಪ್ಪಾರಹಳ್ಳಿ ಹಾಗೂ ಎಂ.ಎಂ ಶ್ರೀಕಾಂತ್ ಸಂಭಾಷಣೆ, ಕೆ.ಎಂ. ಪ್ರಕಾಶ್ ಸಂಕಲನವಿದೆ. ಇದೊಂದು ಕೋಲಾರ ಭಾಷೆಯಲ್ಲಿರುವ ಆಕ್ಷನ್, ಫ್ಯಾಮಿಲಿ ಡ್ರಾಮಾ ಚಿತ್ರವಾಗಿದೆ. ತಾರಾಗಣದಲ್ಲಿ ವಿಜಯ ಕುಮಾರ್, ರಚಿತಾ ರಾಮ್, ರಾಜ್ ಬಿ ಶೆಟ್ಟಿ, ರಿತನ್ಯ ವಿಜಯ್, ಶಿಶಿರ್ ಬೈಕಾಡಿ, ರಾಕೇಶ್ ಅಡಿಗ, ಭಾವನಾ ರಾವ್, ಮಿತ್ರ, ಮಹಾಂತೇಶ್ ಹಿರೇಮತ್, ಅಭಿ ದಾಸ್ ಮುಂತಾದವರು ಇದ್ದಾರೆ.

## ಬಿಗ್‌ಬಾಸ್ ಗೆದ್ದ ಗಿಲ್ಲಿಯನ್ನು ಅಭಿನಂದಿಸಿದ ಸಿಎಂ

ಬೆಂಗಳೂರು: 12ನೇ ಆವೃತ್ತಿಯ ಬಿಗ್ ಬಾಸ್ ವಿಜೇತ ನಟ ಗಿಲ್ಲಿ ನಟರಾಜ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದಿಸಿ, ಶುಭ ಹಾರೈಸಿದರು. ಇಂದು ಮಧ್ಯಾಹ್ನ ಸಿದ್ದರಾಮಯ್ಯ ಅವರನ್ನು ಗಿಲ್ಲಿ ಕಾವೇರಿ ನಿವಾಸದಲ್ಲಿ ಭೇಟಿಯಾದರು. ಈ ವೇಳೆ ಸಚಿವ ಬೈರತಿ ಬಸವರಾಜ್, ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರಾದ ಕೆ.ವಿ ಪ್ರಭಾಕರ್ ಉಪಸ್ಥಿತ-ರಿದ್ದರು.  ಇದ ಈ ಬಾರಿಯ ಬಿಗ್‌ಬಾಸ್‌ನಲ್ಲಿ ಗಿಲ್ಲಿ ಅವರು ವಿಜೇತರಾಗಿದ್ದರೆ ರಕ್ಷಿತಾ ರನ್ನರ್ ಅಪ್, ಅಶ್ವಿನಿ ಗೌಡ ಅವರು ಎರಡನೇ ರನ್ನರ್ ಅಪ್ ಆಗಿ ಹೊರಹೊಮ್ಮಿದ್ದರು.

ಮಂಡ್ಯದ ಮಳವಳ್ಳಿಯ ದಡದಪುರ ಗ್ರಾಮದ ಗಿಲ್ಲಿ ತಮ್ಮ ಮಾತಿನ ಮೋಡಿಯಿಂದ ಕರ್ನಾಟಕದ ಜನರ ಮನಸ್ಸು ಗೆದ್ದಿದ್ದರು. ಅತಿ ಹೆಚ್ಚು ಮತ ಪಡೆಯುವ ಮೂಲಕ ಅರ್ಹವಾಗಿಯೇ ಮೊದಲ ಸ್ಥಾನವನ್ನು ಪಡೆದರು.



## ಫೆಬ್ರವರಿ 6ಕ್ಕೆ ಡಾಲಿ ಪಿಕ್ಚರ್ಸ್ ನಿರ್ಮಾಣದ 'ಜೆಸಿ' ಚಿತ್ರ ತೆರೆಗೆ

ಡಾಲಿ ಧನಂಜಯ ನಟನೆಯ ಜೊತೆಗೆ ತಮ್ಮ 'ಡಾಲಿ ಪಿಕ್ಚರ್ಸ್' ಬ್ಯಾನರ್‌ನಲ್ಲಿ ಹೊಸ ಪ್ರತಿಭೆಗಳಿಗೆ ಸಿನಿಮಾ ನಿರ್ಮಾಣ ಮಾಡುವ ಮೂಲಕ ಹೆಸರು ಮಾಡುತ್ತಿದ್ದಾರೆ. ಇದೀಗ 'ಡಾಲಿ ಪಿಕ್ಚರ್ಸ್'ನಲ್ಲಿ ನಿರ್ಮಾಣವಾದ 'ಜೆಸಿ' ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆ ಆಗಿದೆ. ಹೌದು ಇದೇ ಫೆಬ್ರವರಿ 6ರಂದು 'ಜೆಸಿ' ಸಿನಿಮಾ ಅದ್ದೂರಿಯಾಗಿ ತೆರೆಗೆ ಬರುತ್ತಿದೆ. ಹಾಗಾಗಿ ಇತ್ತೀಚೆಗೆ ಚಿತ್ರತಂಡ ಟ್ರೇಲರ್‌ನ್ನು ಬಿಡುಗಡೆ ಮಾಡಿದೆ. ಸೂರ್ಯ ಪ್ರಖ್ಯಾತ್ ಮತ್ತು ಭಾವನಾ ರೆಡ್ಡಿ ನಟನೆಯ ಈ ಟ್ರೇಲರ್‌ನ್ನು ಹ್ಯಾಟ್ರಿಕ್ ಹೀರೋ ಶಿವರಾಜ ಕುಮಾರ್ ಹಾಗೂ ಜೋಗಿ ಪ್ರೇಮ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದ್ದಾರೆ. ಜೆಸಿ ಒಂದು ಪಕ್ಕ ಮಾಸ್ ಸಿನಿಮಾ. ಜೈಲಿನ ಸುತ್ತ ನಡೆಯುವ ಕಥೆ ಒಳಗೊಂಡಿದೆ. ಹಾಗಾಗಿ 'ಜೋಗಿ'ಯ ಸೂಪರ್ ಹಿಟ್ ಜೋಡಿ ಶಿವಣ್ಣ ಮತ್ತು ಪ್ರೇಮ್ ಇಬ್ಬರೂ ಸೇರಿ ಟ್ರೇಲರ್ ರಿಲೀಸ್ ಮಾಡಿದರೆ.

ಚೇತನ್ ಜೈರಾಮ್ ಅವರ ಚೊಚ್ಚಲ ನಿರ್ದೇಶನದಲ್ಲಿ ತಯಾರಾದ ಜೆಸಿ, ಜೈಲಿನಲ್ಲಿ ನಡೆಯುವ ಕಥೆ. ಜೈಲು ಒಳಗಿನ ಅವ್ಯವಹಾರ, ಕೈದಿಗಳ ದರ್ಬಾರ್ ಈ ಸಿನಿಮಾದಲ್ಲಿ ತೋರಿಸಲಾಗಿದೆ. ಫೈಟ್, ಕೊಲೆ, ರಕ್ತ ಇದರ ನಡುವೆ ಅಪ್ಪ ಮಗನ ಭಾವನಾತ್ಮಕ ಕಥೆಯನ್ನು ಹೇಳಲಾಗಿದೆ. ಟ್ರೇಲರ್‌ನಲ್ಲಿ ಮಗ ಕಿರೀಟ ಹೊತ್ಕೊಂದಿದ್ರೂ ಪರವಾಗಿಲ್ಲ, ಕಳಂಕ ಹೊತ್ಕೋಬಾರ್ದು ಎನ್ನುವ ಡೈಲಾಗ್ ಗಮನ ಸೆಳೆಯುತ್ತಿದೆ. 'ಜೆಸಿ ದಿ ಯೂನರ್ಸಿಟಿ' ಟ್ರೇಲರ್ ನೋಡಿ ನಿರ್ದೇಶಕ ಪ್ರೇಮ್ ಮತ್ತು ಶಿವಣ್ಣ ಇಬ್ಬರು ಫಿದಾ ಆಗಿದ್ದಾರೆ. ಹೀರೋ ಪ್ರಖ್ಯಾತ್ ಅವರನ್ನು ಹಾಡಿ ಹೊಗಳಿದರು. ಹೀರೋ ಪ್ರಖ್ಯಾತ್ ನೋಡಿ ಶಿವಣ್ಣನ ಜೊತೆಗಿನ ಶೂಟಿಂಗ್ ಅನುಭವನ್ನು ಬಿಚ್ಚಿಟ್ಟರು ಜೋಗಿ ಪ್ರೇಮ್. ಹಾಗೂ 'ಯಾರಿಗೂ ಜೈಲಿನ ಅನುಭವ ಬೇಡ, ಅಲ್ಲಿ ದುಡ್ಡು ಇರೋನಿಗೆ ಮಾತ್ರ ಬೆಲೆ, ಎಷ್ಟೋ ಜನರಿಗೆ ಬೇಲ್ ಸಿಕ್ಕಿದ್ರು ಬಿಡಿಸಿಕೊಳ್ಳಲು ಆಗಲ್ಲ ಅಂತ ಸ್ಥಿತಿಯಲ್ಲಿದ್ದಾರೆ' ಎಂದು ಪ್ರೇಮ್ ಜೈಲಿನ ಬಗ್ಗೆ ಹೇಳಿದರು. ಬಳಿಕ ಶಿವಣ್ಣನ ಹಾಗೆ ಲಾಂಗ್ ಹಿಡಿಯೋದನ್ನ ಕಲಿತಿದ್ದೀಯಾ ಎಂದು ಪ್ರಖ್ಯಾತ್‌ನ ಹೊಗಳಿದರು.

ಶಿವಣ್ಣ ಕೂಡ ಟ್ರೇಲರ್ ನೋಡಿ ತುಂಬಾ ಖುಷಿ ಪಟ್ಟರು. 'ಜೈಲ್ ಒಂದು ಪರಿವರ್ತನೆಯ ಜಾಗ, ಜೈಲಿಗೆ ಹೋಗಿ ಬಂದವರು ಅನೇಕರು ಬದಲಾಗುತ್ತಾರೆ ಎಂದರು.



## ನಾಳೆ (ಜ.24) 'ಫಾರ್ಗಾ' ಟ್ರೇಲರ್ ಬಿಡುಗಡೆ

ಅಶ್ವಿನಿ ಆಡಿಯೋ ಕಂಪನಿ ಮಾಲೀಕನಾಗಿ, ಶಿವರಾಜ್‌ಕುಮಾರ್ ಅಭಿನಯದ 'ಜೋಗಿ', ಪ್ರೇಮ್ ನಟನೆ, ನಿರ್ದೇಶನದ 'ಪ್ರೀತಿ ಏಕೆ ಭೂಮಿ ಮೇಲಿದೆ' ಹೀಗೆ ಹಲವಾರು ಯಶಸ್ವಿ ಚಿತ್ರಗಳನ್ನು ನಿರ್ಮಿಸಿದ ನಿರ್ಮಾಪಕ ಅಶ್ವಿನಿ ರಾಮ್ ಪ್ರಸಾದ್. ಇದೀಗ ತಮ್ಮ ಪುತ್ರ ಅರುಣ್ ರಾಮ್ ಪ್ರಸಾದ್‌ರನ್ನು ನಾಯಕನಾಗಿ ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ. ಆ ಚಿತ್ರದ ಹೆಸರು 'ಫಾರ್ಗಾ'. ಈಗಾಗಲೇ ಟೀಸರ್, 'ನೀನು ನನಗೆ ...' ಎಂಬ ರೊಮ್ಯಾಂಟಿಕ್ ಹಾಡಿನಿಂದ ಗಮನ ಸೆಳೆದಿರುವ 'ಫಾರ್ಗಾ' ಇದೇ ಫೆಬ್ರವರಿ 6ರಂದು ರಾಜ್ಯಾದ್ಯಂತ ತೆರೆಗೆ ಬರುತ್ತಿದೆ. ಇದೇ ಜನವರಿ 24ರಂದು ಬೆಂಗಳೂರಿನ ಒರಿಯನ್ ಮಾಲ್‌ನಲ್ಲಿ ಅದ್ದೂರಿಯಾಗಿ ಚಿತ್ರದ ಟ್ರೇಲರ್ ಬಿಡುಗಡೆ ಆಗಲಿದೆ.

ಇದೊಂದು ಅಡ್ವೆಂಚರಸ್ ಡ್ರಾಮಾ ಕಥಾನಕವಾಗಿದ್ದು, ಚಿತ್ರದಲ್ಲಿ ಅರುಣ್ ಒಬ್ಬ ರೈಟರ್, ಸಂಶೋಧಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಎಂ. ಶಶಿಧರ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್-ಕಟ್ ಹೇಳಿದ್ದಾರೆ. ಈ ಚಿತ್ರದಲ್ಲಿ ಫಾರ್ಗಾ ಒಂದು ಊರಿನ ಹೆಸರು. ನಾಯಕಿ ಪಾತ್ರದಲ್ಲಿ ರೆಹಾನ ಅಭಿನಯ ಮಾಡಿದ್ದಾರೆ. 4 ವರ್ಷಗಳ ಹಿಂದೆಯೇ ಶುರುವಾದ ಫಾರ್ಗಾ ಕಾರಣಗಳಿಂದ ತಡವಾಗಿ ರಿಲೀಸ್ ಆಗುತ್ತಿದೆ. ಇದೊಂದು ವಿಭಿನ್ನ ಜಾನರ್ ಚಿತ್ರವಾಗಿದ್ದು, ನಾಯಕ ಇಲ್ಲಿ 3 ಗೆಟಪ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದಾನೆ. ಅಡ್ವೆಂಚರಸ್ ಡ್ರಾಮಾದಲ್ಲಿ ಫಿಕ್ಷನಲ್ ಕಥೆಯಿದ್ದು, ಹಾರರ್, ಸಸ್ಪೆನ್ಸ್, ಥಿಲ್ಲರ್, ಆಕ್ಷನ್ ಹೀಗೆ ಎಲ್ಲ ರೀತಿಯ ಮನರಂಜನಾತ್ಮಕ ಅಂಶಗಳನ್ನು ಒಳಗೊಂಡಿದೆ. ಚಿತ್ರವನ್ನು ಮಂಗಳೂರು, ಚಿಕ್ಕಮಗಳೂರು, ದಾಂಡೇಲಿ, ಆಗುಂಬೆ ಹಾಗೂ ಬೆಂಗಳೂರಲ್ಲಿ ಚಿತ್ರೀಕರಿಸಲಾಗಿದೆ.

ದ ಲ್ಯಾಂಡ್ ಆಫ್ ಶಾಡೋ ಎಂಬ ಅಡಿಬರಹ ಈ ಚಿತ್ರಕ್ಕಿದೆ. ಅಂದಂಗೆ ಗುರುಕಿರಣ್ ಮತ್ತು ಆರ್.ಪಿ.ಪಟ್ನಾಯಕ್ ಸಂಗೀತ, ಥ್ರಿಲ್ಲರ್ ಮಂಜು ಮತ್ತು ಜಾಲಿ ಬಾಸ್ಟಿಯನ್ ಸಾಹಸ, ಗುರು ಪ್ರಸಾದ್ ನಾರ್ನಾಡ್ ಛಾಯಾಗ್ರಹಣ, ಎಂ ಶಶಿಧರ್ ಸಂಕಲನ ಸಿನಿಮಾಗಿದೆ. ಸಾಯಿಕುಮಾರ್, ಸಂಪತ್ ರಾಜ್, ರಾಹುಲ್ ದೇವ್, ಅರುಣ್ ಸಾಗರ್, ಮಿತ್ರ, ರೆಹಾನ್ ಮುಂತಾದವರು ಚಿತ್ರದ ತಾರಾಗಣದಲ್ಲಿದ್ದಾರೆ.

## ಗಮನ ಸೆಳೆದ ಅಪ್ಪ-ಮಗನ ಬಾಂಧವ್ಯದ 'ಚೌಕಿದಾರ್' ಟ್ರೇಲರ್

ಕನ್ನಡ ಚಿತ್ರರಂಗದ ಪ್ರತಿಭಾವಂತ ನಟ ಪೃಥ್ವಿ ಅಂಬಾರ್ ಹಾಗೂ ದೊಡ್ಮನೆ ಕುಡಿ ಧನ್ಯಾ ರಾಮ್ ಕುಮಾರ್ ನಟಿಸಿರುವ ಬಹು ನಿರೀಕ್ಷಿತ ಸಿನಿಮಾ 'ಚೌಕಿದಾರ್'. ಈಗಾಗಲೇ ಟೈಟಲ್ ಹಾಗೂ ಕಂಟೆಂಟ್ ಮೂಲಕ ಪ್ರೇಕ್ಷಕರ ವಲಯದಲ್ಲಿ ಕುತೂಹಲ ಹೆಚ್ಚಿಸಿರುವ ಈ ಚಿತ್ರದ ಟ್ರೇಲರ್ ಸದ್ಯ ಜಾಲತಾಣದಲ್ಲಿ ಸಂಚಲನ ಮೂಡಿಸಿದೆ. ಚಿತ್ರದ ಬಗ್ಗೆ ಹೇಳಿರುವ ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ, 'ನಾನು ಏನ್ ಹೇಳಬೇಕು ಅದನ್ನು ಸಿನಿಮಾದಲ್ಲಿ ತೋರಿಸಿದ್ದೇನೆ. ಮ್ಯೂಸಿಕ್ ಸಚಿನ್ ಬಸ್ರೂರ್ ಮಾಡಿದ್ದಾರೆ. ನಾಗೇಂದ್ರ ಪ್ರಸಾದ್, ಸಂತೋಷ್ ನಾಯಕ್, ಪ್ರಮೋದ್ ಮರವಂತೆ ಹಾಡಿಗೆ ಸಾಹಿತ್ಯ ಬರೆದಿದ್ದಾರೆ. ಚೌಕಿದಾರ್ ಅಂದರೆ ಪ್ರೊಟೆಕ್ಟರ್. ಈ ಟೈಟಲ್ ರಾಜಕೀಯಕ್ಕೆ ಸಂಬಂಧವಿಲ್ಲ. ಇದೇ ತಿಂಗಳ 30ರಂದು ಸಿನಿಮಾ ತೆರೆಗೆ ಬರಲಿದೆ. ನಿಮ್ಮ ಹಾರೈಕೆ ಇರಲಿ' ಎಂದಿದ್ದಾರೆ.

ನಂತರ ನಾಯಕ ಪೃಥ್ವಿ ಅಂಬಾರ್ ಮಾತನಾಡಿ, 'ನಮ್ಮ ಚಿತ್ರದ ಚೌಕಿದಾರ್ ನಿರ್ದೇಶಕರು. ಪ್ರತಿಯೊಂದನ್ನು ನನಗೆ ಗೈಡ್ ಮಾಡಿದ್ದಾರೆ. ಏನೇ ಕ್ರೆಡಿಟ್ ಬಂದರು ಅದು ಅವರಿಗೆ ಸಲ್ಲಬೇಕು. ಸರ್ ಸ್ಕ್ರಿಪ್ಟ್ ಓದಿದಾಗ ನನ್ನ ಲೈಫ್ ನಲ್ಲಿ ನಾನು ಬದಲಾವಣೆ ಮಾಡಿಕೊಂಡಿದ್ದೇನೆ. ಸಾಯಿಕುಮಾರ್ ಸರ್ ಈ ಚಿತ್ರದ ನಿಜವಾದ ನಾಯಕ. ಸಿನಿಮಾ ಬರೀ ಎಂಟರ್ಟೈನ್ಮೆಂಟ್ ವಿಷಯವಾಗಿ ಇರದೇ, ಅದು ಒಂದಷ್ಟು ಆಲೋಚನೆ ಜನರನ್ನು ಮೂಡಿಸುವ ಕೆಲಸವನ್ನು ಚೌಕಿದಾರ್ ಸಿನಿಮಾ ಮಾಡಲಿದೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಚೌಕಿದಾರ್ ಸಿನಿಮಾ ಮೂಲಕ ಚಂದ್ರಶೇಖರ್ ಬಂಡಿಯಪ್ಪ ಕಾಡುವ ಕಥೆಯನ್ನು ಹೇಳಲು ಹೊರಟಿದ್ದಾರೆ. ಅಪ್ಪ ಮಗನ ಬಾಂಧವ್ಯವನ್ನು ಈ ಚಿತ್ರದಲ್ಲಿ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಚೌಕಿದಾರ್‌ನಲ್ಲಿ, ಚಿತ್ರರಂಗದಲ್ಲಿ 50 ವರ್ಷ ಪೂರೈಸಿರುವ ಹಿರಿಯ ನಟ ಸಾಯಿ ಕುಮಾರ್ ಅವರು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಚೈತ್ರದ ಪ್ರೇಮಾಂಜಲಿ ಚಿತ್ರದ ನಾಯಕಿ ಶ್ವೇತಾ, ಸುಧಾರಾಣಿ ಪ್ರಮುಖ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಬಿಗ್ ಬಾಸ್ ಖ್ಯಾತಿಯ ಗಿಲ್ಲಿ ನಟ, ಧರ್ಮ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ.


ಫಾರ್ಗಾ
ರಾಮ್ ಪ್ರಸಾದ್, ರೆಹನಾ

## 200 ಅಡಿ ಆಳದ ಕಮರಿಗೆ...

(1ನೇ ಪುಟದಿಂದ)
ಆರಂಭದಲ್ಲಿ ನಾಲ್ವರು ಯೋಧರ ಶವಗಳನ್ನು ಸ್ಥಳದಿಂದ ಹೊರತೆಗೆಯಲಾಗಿದ್ದು, 13 ಮಂದಿಯನ್ನು ಸಮೀಪದ ಸೇನಾ ಆಸ್ಪತ್ರೆಗೆ ರವಾನಿಸಲಾಗಿತ್ತು. ತೀವ್ರವಾಗಿ ಗಾಯಗೊಂಡ ಕೆಲವು ಸೈನಿಕರನ್ನು ಹೆಚ್ಚಿನ ಚಿಕಿತ್ಸೆಗಾಗಿ ಉಧಮ್‌ಪುರ ಮಿಲಿಟರಿ ಆಸ್ಪತ್ರೆಗೆ ವಿಮಾನದಲ್ಲಿ ರವಾನಿಸಲಾಗಿದೆ. ಬಳಿಕ ಇನ್ನೂ ಏಳು ಸಿಬ್ಬಂದಿ ಸಾವಿಗೀಡಾಗಿದ್ದು, ಮೃತರ ಸಂಖ್ಯೆ 10ಕ್ಕೆ ಏರಿಕೆಯಾಯಿತು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಸರ್ಕಾರದ ಹಿರಿಯ ಅಧಿಕಾರಿಗಳು ಮತ್ತು ಸೇನಾ ಅಧಿಕಾರಿಗಳು ಅಪಘಾತ ಸಂಭವಿಸಿದ ಸ್ಥಳಕ್ಕೆ ಧಾವಿಸಿ, ಪರಿಸ್ಥಿತಿಯನ್ನು ಅವಲೋಕಿಸಿದ್ದಾರೆ.

**ಕಥೆ-ಕವನ, ಚುಟುಕು, ಮಕ್ಕಳು ಬಿಡಿಸಿದ ಚಿತ್ರಗಳನ್ನು ಪ್ರಕಟಿಸುವ ವಿಭಾಗ**
**9740137083**

### ದಿನಕ್ಕೊಂದು ಚುಟುಕು

ನಗುವಿನೊಳಗಿಹ ನೋವನರಿಯದೆ
ಅಳುವಿಳನೊಳಗಿಹ ಸಂತಸವನರಿಯದೆ
ಕೋಪದೊಳಗಿಹ ಕಾಳಜಿಯನರಿಯದೆ
ದೂರದಿರು ನೀ ಪದಗಳರ್ಥಕ್ಕೆ ಮರುಳಾಗಿ

– ಡಾ. ಮಮು

### ದಿನಕ್ಕೊಂದು ನುಡಿ ಮುತ್ತು

ಮಾತು
ಅರ್ಥವಾದಷ್ಟು
ಬೇಗನೆ
ಮೌನವೂ
ಅರ್ಥವಾದಲ್ಲಿ
ಸಂಬಂಧಗಳು
ಸ್ಥಿರತೆಯನ್ನು
ಪಡೆಯುತ್ತವೆ.

– ಮಂಜುಳಾ ಪ್ರಸಾದ್ ದಾವಣಗೆರೆ

**ನಗರವಾಣಿ** ದಾವಣಗೆರೆ
ಜನವರಿ 23, 2026
ಶುಕ್ರವಾರ,
ಪುಟ-3
ಪತ್ರಿಕೆಗಳಿಗೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
08192–254186

## ಪಿಎಲ್ಡಿ ಬ್ಯಾಂಕ್ ಅಧ್ಯಕ್ಷರಾಗಿ ಬಿ.ಹನುಮಂತರೆಡ್ಡಿ ಆಯ್ಕೆ




ಹರಿಹರ: ಇಲ್ಲಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರಾಗಿ ಬಿಳಸನೂರು ಗ್ರಾಮದ ಬಿ.ಹನುಮಂತರೆಡ್ಡಿ, ಉಪಾಧ್ಯಕ್ಷರಾಗಿ ಭಾನುವಳ್ಳಿಯ ಸದಾನಂದ ಬಿ.ಎಸ್., ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷರಾಗಿದ್ದ ಸಿರಿಗೆರೆ ರಾಜಣ್ಣ, ಉಪಾಧ್ಯಕ್ಷರಾಗಿದ್ದ ರೇವಣಸಿದ್ದಪ್ಪ ಕೆ. ಇವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಮಂಗಳವಾರ ನಡೆದ ಚುನಾವಣೆಯಲ್ಲಿ ಇವರ ಆಯ್ಕೆ ಅವಿರೋಧವಾಗಿ ನಡೆಯಿತು.

ನಂತರ ನಡೆದ ಸಭೆಯಲ್ಲಿ ಮಾತನಾಡಿದ ಬಿ.ಹನುಮಂತರೆಡ್ಡಿ, ಸಾಲ ಪಡೆದ ಗ್ರಾಹಕರು ಸಾಲವನ್ನು ಮರುಪಾವತಿ ಮಾಡುವುದರಿಂದ ಇತರೆ ಗ್ರಾಹಕರಿಗೂ ಸಾಲ ಸೌಲಭ್ಯ ವಿಸ್ತರಿಸಲು ಸಹಾಯಕವಾಗುತ್ತದೆ. ಸಾಲ ಪಡೆದವರು ನಿಗದಿತ ಸಮಯದೊಳಗೆ ಮರುಪಾವತಿ ಮಾಡಬೇಕು. ಬ್ಯಾಂಕಿನ ಏಳಿಗೆಗೆ ಸಹಕರಿಸಬೇಕಾಗಿದೆ ಎಂದು ಕೋರಿದರು.

ನಿಕಟಪೂರ್ವ ಅಧ್ಯಕ್ಷ ಮಲೇಬೆನ್ನೂರಿನ ಸಿರಿಗೆ–ರೆ ರಾಜಣ್ಣ, ಉಪಾಧ್ಯಕ್ಷರಾಗಿದ್ದ ಕೆ. ಬೇವಿನಹಳ್ಳಿಯ ರೇವಣಸಿದ್ದಪ್ಪ ಕೆ, ಸದಸ್ಯರಾದ ಗುತ್ತೂರಿನ ಹೆಚ್. ಚಂದ್ರಪ್ಪ, ಸಿರಿಗೆರೆಯ ಮಾಳಿ ಮಲ್ಲೇಶಪ್ಪ, ಕೊಂಡಜ್ಜಿಯ ಜಲಜಾಕ್ಷಿ ಓ.ವಿ., ಹಳ್ಳಿಹಾಳಿನ ಸಾವಿತ್ರಮ್ಮ, ಜಿ.ಟಿ. ಕಟ್ಟೆಯ ಜಿ.ಹೆಚ್. ಸಂತೋಷ್, ಗುಳದಹಳ್ಳಿಯ ಜಿ.ಎನ್. ನಾಗರಾಜ, ಹರಿಹರದ ಎಂ.ಬಿ. ಪ್ರಭುದೇವ, ಬಸವನಗೌಡ ಜಿ.ಎಸ್. ಹಾಗೂ ಕೊಕ್ಕನೂರಿನ ಟಿ. ನಂದಿಗೌಡ್ರ, ಬಿಜೆಪಿ ಮುಖಂಡರಾದ ಹನಗವಾಡಿ ವೀರೇಶ್, ಗ್ರಾಪಂ ಮಾಜಿ ಅಧ್ಯಕ್ಷ ರಾಜಣ್ಣ, ರಮೇಶ್ ಮತ್ತಿತರರು

## ವೀರಶೈವ ಮಹಾಸಭಾದಿಂದ ಖಂಡ್ರೆಯವರಿಗೆ ಶ್ರದ್ಧಾಂಜಲಿ



ದಾ ನಗರವಾಣಿ ಸುದ್ದಿ

ದಾವಣಗೆರೆ : ಇತ್ತೀಚೆಗೆ ನಿಧನರಾದ ಮಾಜಿ ವಿಧಾನಸಭಾ ಸದಸ್ಯರು ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಮಾಜಿ ಅಧ್ಯಕ್ಷರು ಆದ ಲಿಂಗೈಕ್ಯ ಭೀಮಣ್ಣ ಖಂಡ್ರೆ ಅವರಿಗೆ ಸಂತಾಪ ಸಭೆ ಹಾಗೂ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ನಗರದ ಎಂಬಿಎ ಕಾಲೇಜ್ ಆವರಣದಲ್ಲಿರುವ ಮಹಾಸಭಾ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಉಪಾಧ್ಯಕ್ಷ ಅಥಣಿ ಎಸ್ ವೀರಣ್ಣ, ಕಿರವಾಡಿ ಸೋಮಣ್ಣ, ರಾಜ್ಯ ಘಟಕದ ಕಾರ್ಯದರ್ಶಿ ಅಣಬೇರ್ ಸಂದೀಪ್, ಮಹಾಸಭಾ ಜಿಲ್ಲಾ ಗೌರವಾಧ್ಯಕ್ಷ ಉಳುವಯ್ಯ, ಜಿಲ್ಲಾಧ್ಯಕ್ಷ ಐಗೂರ್ ಸಿ ಚಂದ್ರಶೇಖರ್, ಬೆಳಗಾವಿ ಬಸವರಾಜಪ್ಪ, ಸಿದ್ದಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅವಿನಾಶ್ ಬಸವರಾಜ್, ಮಹಿಳಾ ಘಟಕದ ಶ್ರೀಮತಿ ಸುಷ್ಮಾ ಪಾಟೀಲ್, ಶ್ರೀಮತಿ ನೀತಾ ನಂದೀಶ್, ಶ್ರೀಮತಿ ವಿಜಯ ಬಸವರಾಜ್, ಶ್ರೀಮತಿ ಕೆ.ಪಿ. ರಾಜೇಶ್ವರಿ ಅವರು, ನಗರ ಮಹಿಳಾ ಘಟಕದ ಅಧ್ಯಕ್ಷ ದ್ರಾಕ್ಷಾಣಮ್ಮ, ತಾಲೂಕು ಯುವ ಘಟಕದ ಅಧ್ಯಕ್ಷರಾದ ಅಜಿತ್, ನಗರ ಘಟಕದ ಅಧ್ಯಕ್ಷ ಎ.ಹೆಚ್. ಸಿದ್ದಲಿಂಗಸ್ವಾಮಿ, ಕೋಶಾಧ್ಯಕ್ಷ ಐಗೂರ್ ಶಿವಕುಮಾರ್, ಉಪಾಧ್ಯಕ್ಷ ನವೀನ್ ಕಕ್ಕರಗೊಳ್ಳ, ಪ್ರಧಾನ ಕಾರ್ಯದರ್ಶಿ ಧನ್ಯಕುಮಾರ್, ಮಹಾಸಭಾದ ಪದಾಧಿಕಾರಿಗಳು, ಸದಸ್ಯರುಗಳು ಉಪಸ್ಥಿತರಿದ್ದು ಮೃತರ ಆತ್ಮಕ್ಕೆ ಶಾಂತಿ ದೊರಕಲೆಂದು ಪ್ರಾರ್ಥಿಸಿದರು.

## ಹರಿಹರದಲ್ಲಿ ಎಸ್ಸಿ–ಎಸ್ಟಿ ಕುಂದು ಕೊರತೆ ಸಭೆ...

(1ನೇ ಪುಟದಿಂದ) ಕೊಕ್ಕನೂರು ಗ್ರಾಮದ ಡಾ.ಬಾಬು ಜಗಜೀವನರಾಮ್ ಭವನಕ್ಕೆ ವಿದ್ಯುತ್ ಸೌಲಭ್ಯ, ಬೆಳ್ಳೂಡಿಯಲ್ಲಿ ಅಪೂರ್ಣವಾಗಿರುವ ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸಬೇಕು, ಭಾನುವಳ್ಳಿಯಲ್ಲಿ ಶಿಥಿಲಗೊಂಡ ಅಂಬೇಡ್ಕರ್ ಭವನ ತೆರವುಗೊಳಿಸಿ ಹೊಸ ಭವನ ನಿರ್ಮಾಣ ಮಾಡಬೇಕಿದೆ ಎಂದು ಕದಸಂಸ ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಗಮನ ಸೆಳೆದರು.

ಗುತ್ತೂರು ಗ್ರಾಮದಲ್ಲಿ ಪರಿಶಿಷ್ಟರಿಗೆ ರುದ್ರಭೂಮಿ ಇಲ್ಲ, ಮಳೆಗಾದಲ್ಲಿ ನದಿಯಲ್ಲಿ ಪ್ರವಾಹ ಬಂದಾಗ ಮೃತರ ಅಂತ್ಯ ಸಂಸ್ಕಾರ ಮಾಡುವುದು ದುಸ್ತರವಾಗುತ್ತಿದೆ. ತಾಲ್ಲೂಕು ಮತ್ತು ಜಿಲ್ಲಾಡಳಿತ ರುದ್ರಭೂಮಿಗೆ ಜಮೀನು ಮಂಜೂರು ಮಾಡಬೇಕೆಂದು ಸಂಗೀತ ಕಲಾವಿದ ಅಣ್ಣಪ್ಪ ಅಜ್ಜೇರ್ ಹೇಳಿದರು.

ಸಭೆಯಲ್ಲಿ ಪ್ರಸ್ತಾಪಿಸಿರುವ ಸಮಸ್ಯೆಗಳನ್ನು ಕ್ರೋಢೀಕರಿಸಿ ಸಂಬಂಧಿತ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಸೂಚಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದೆಂದು ಗ್ರಾಮಾಂತರ ಡಿವೈಎಸ್ ಪಿ ಬಸವರಾಜ್ ಬಿ.ಎಸ್. ಹೇಳಿದರು.

ಇನ್ ಸ್ಪೆಕ್ಟರ್ ಗಳಾದ ಆರ್.ಎಫ್ ದೇಸಾಯಿ, ಸುರೇಶ್ ಸಗರಿ, ಬಿಇಒ ಡಿ.ದುರುಗಪ್ಪ, ಸಿಡಿಪಿಒ ಪ್ರಿಯದರ್ಶಿನಿ ದಲಿತ ಸಮುದಾಯದ ಮುಖಂಡರಾದ ರಾಜನಹಳ್ಳಿ ನಾಗೇಂದ್ರಪ್ಪ, ಕೆ.ಬಿ.ಮಂಜುನಾಥ್, ಕೊಟ್ರೇಶ್, ಹರಳಹಳ್ಳಿ ಹನುಮಂತಪ್ಪ, ಎ.ಕೆ ಭೂಮೇಶ್, ಎಚ್.ಸುಧಾಕರ, ಕೊತ್ವಾಲ್ ಹನುಮಂತಪ್ಪ, ಬೇವಿನಹಳ್ಳಿ ಶಿವರಾಂ, ಧೂಳೆಹೊಳೆ ಪರಶುರಾಮ್, ತಿಪ್ಪೇಶ್, ಬೆಳ್ಳೂಡಿ ಹಾಲೇಶ್, ಆರ್.ವಿಜಯಕುಮಾರ್, ವೈ.ಬಿ.ಪ್ರಭಾಕರ್, ಸಂತೋಷ ನೋಟದವರ, ಜಿ.ಕೆ.ಪಂಚಾಕ್ಷರಿ ಹಾಗೂ ಇತರರಿದ್ದರು.

## ಪದ್ಮಶಾಲಿ ಸಮಾಜ ಬಾಂಧವರ ಸಂಪರ್ಕಕ್ಕಾಗಿ 'ಜಿಲ್ಲಾ ಕೈಪಿಡಿ' ಬಿಡುಗಡೆಗೆ ಸಿದ್ಧತೆ: ಅರಣಿ

ದಾವಣಗೆರೆ.ಜ.22: ಜಿಲ್ಲಾ ಪದ್ಮಶಾಲಿ ಸ್ವಯಂಸೇವಾ ಸಂಘದ ವತಿಯಿಂದ ಜಿಲ್ಲೆಯಲ್ಲಿರುವ ಸಮಾಜ ಬಾಂಧವರ ಪರಸ್ಪರ ಸಂಪರ್ಕ ಸಾಧಿಸಲು ಜಿಲ್ಲಾ ಕೈಪಿಡಿ ಹೊರತರಲು ಉದ್ದೇಶಿಸಲಾಗಿದೆ ಎಂದು ಸಂಘದ ಅಧ್ಯಕ್ಷ ತುಕಾರಾಮಪ್ಪ ಅರಣಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜದವರ ಸಂಪೂರ್ಣ ಮಾಹಿತಿ ಒಳಗೊಂಡ ಕೈಪಿಡಿ ಮತ್ತು ಮಾಹಿತಿ ಕೋಶವನ್ನು ಸಂಘದಿಂದ ಮುದ್ರಿಸಿ, ಎಲ್ಲರಿಗೂ ಉಚಿತವಾಗಿ ತಲುಪಿಸಲಾಗುವುದು. ಇದಕ್ಕಾಗಿ ಜಿಲ್ಲೆಯಲ್ಲಿ ವಾಸಿಸುವ ಪದ್ಮಶಾಲಿ ಸಮಾಜದವರು ತಮ್ಮ ಮನೆಯ ಮುಖ್ಯಸ್ಥರ ಹೆಸರು, ಸಂಪೂರ್ಣ ವಿಳಾಸ, ಭಾವಚಿತ್ರ ಮತ್ತು ಮೊಬೈಲ್ ಸಂಖ್ಯೆಯನ್ನು ದೇವರಾಜ ಅರಸು ಬಡಾವಣೆ ಬಿ–ಬ್ಲಾಕ್ ನಲ್ಲಿರುವ ಸಂಘದ ಕಚೇರಿಗೆ ತಿಳಿಸಬೇಕು ಎಂದು ಮನವಿ ಮಾಡಿದರು.

ದಾವಣಗೆರೆ ಜಿಲ್ಲೆಯಲ್ಲಿ ಪದ್ಮಶಾಲಿ ಸಮಾಜದವರ ಸುಮಾರು 3 ಸಾವಿರ ಮನೆಗಳಿವೆ. ಸಂಪರ್ಕಿಸುವಾಗ ಅನುಕೂಲವಾಗಲೆಂದು ಕೈಪಿಡಿ ಹೊರ ತರಲಾಗುತ್ತಿದೆ. ಇದಲ್ಲದೆ, ಅಂತ್ಯಸಂಸ್ಕಾರ ಸಂದರ್ಭದಲ್ಲಿ ಮೃತರಿಗೆ ಗೌರವ, ಆರ್ಥಿಕವಾಗಿ ಅಶಕ್ತರಿಗೆ ನೆರವು, ಮುಕ್ತಿವಾಹನ ವ್ಯವಸ್ಥೆಗೂ ಉದ್ದೇಶಿಸಲಾಗಿದೆ. ಕೈಪಿಡಿಗೆ ಮಾಹಿತಿ ನೀಡಲು ಸಂಘದ ಕಚೇರಿಯಲ್ಲಿ ಸಂಜೆ 7ರಿಂದ ರಾತ್ರಿ 9 ಗಂಟೆಯೊಳಗೆ ಅರ್ಜಿ ಪಡೆಯಬೇಕು. ಹೆಚ್ಚಿನ ವಿವರಗಳಿಗೆ ಮೊ:70264 77727 ಸಂಪರ್ಕಿಸುವಂತೆ ಅವರು ವಿನಂತಿಸಿದರು. ಸಂಘದ ಗೌರವಾಧ್ಯಕ್ಷ ಎಂ.ಜಿ. ನಾರಾಯಣ ಸ್ವಾಮಿ, ಉಪಾಧ್ಯಕ್ಷ ಬಿ.ಎ.ತಿಪ್ಪೇ ಸ್ವಾಮಿ, ಕಾರ್ಯದರ್ಶಿ ಎಸ್.ಟಿ. ದೇವರಾಜ, ಐ.ವೆಂಕಟೇಶ, ಎಂ.ಚೈತ್ರಾ, ಹೆಚ್.ಬಿ.ರಾಜು ಸುದ್ದಿಗೋಷ್ಠಿಯಲ್ಲಿದ್ದರು.

## 16ನೇ ರಾಷ್ಟ್ರೀಯ ಮತದಾರರ ದಿನಾಚರಣೆ

ಜನವರಿ 25 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾಡಳಿತ ಭವನದ ತುಂಗಾಭದ್ರ ಸಭಾಂಗಣದಲ್ಲಿ "ನನ್ನ ಭರತ ನನ್ನ ಮತ ನಾನು ಭಾರತೀಯ" ಎಂಬ ಧ್ಯೇಯವಾಕ್ಯದೊಂದಿಗೆ 16ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಮತದಾರರ ನೋಂದಣಾಧಿಕಾರಿ ಹಾಗೂ ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದ್ದಾರೆ.

## ಜಗಳೂರು ತಾ॥ ಶಾಲಾ ಕಟ್ಟಡಗಳ...

(1ನೇ ಪುಟದಿಂದ) ಕ್ಷೇತ್ರದಲ್ಲಿ ಶತಮಾನ ಪೂರೈಸುವ ಅಂಚಿನಲ್ಲಿರುವ ಶಾಲೆಗಳಲ್ಲಿ ಹಾಲೇಕಲ್ಲು ಸರ್ಕಾರಿ ಪ್ರಾಥಮಿಕ ಶಾಲೆಯೂ ಒಂದಾಗಿದೆ. ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಆದ್ಯತೆ ನೀಡುವೆ, ಎಸ್‌ಸಿಎಸ್‌ಟಿ, ಹಿಂದುಳಿದ ವರ್ಗಗಳ ಬಡ ಮಕ್ಕಳಿಗೆ ಸರ್ಕಾರಿ ಶಾಲೆಗಳೇ ಭವಿಷ್ಯ ರೂಪಿಸಲಿವೆ. ಶಿಕ್ಷಕರ ಕೊರೆತೆಯಿದ್ದಲ್ಲಿ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಶಿಕ್ಷಣ ಸಚಿವರು ಕ್ಷೇತ್ರಕ್ಕೆ ಆಗಮಿಸಿ ಹೋಗಿದ್ದು ಸ್ಥಳೀಯ ಶೈಕ್ಷಣಿಕ ಸಮಸ್ಯೆಗಳತ್ತ ಗಮನ ಹರಿಸುವ ಹಾಗೂ ಶಾಲಾ ದುರಸ್ಥಿ, ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಹಂತ ಹಂತವಾಗಿ ಅನುದಾನ ಒದಗಿಸುವ ಭರವಸೆ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

<u>ದೇವಸ್ಥಾನ ಅಭಿವೃದ್ದಿಗೆ ಅನುದಾನಕ್ಕೆ ಮನವಿ:</u> ಗ್ರಾಮಕ್ಕೆ ಆಗಮಿಸಿದ್ದ ಶಾಸಕ ಬಿ.ದೇವೇಂದ್ರಪ್ಪ ಅವರಿಗೆ ಗ್ರಾಮಸ್ಥರು ಬಸವೇಶ್ವರ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರ್ಪಡೆಗೊಂಡಿದೆ. ಈಗಾಗಲೇ ದೇವಸ್ಥಾನ ಅಭಿವೃದ್ದಿ ಸಮಿತಿಯಿಂದ 30 ಲಕ್ಷ ರೂಪಾಯಿ ವೆಚ್ಚದ ಅಂದಾಜು ಕ್ರಿಯಾಯೋಜನೆ ಪ್ರಸ್ತಾವನೆ ತಯಾರಿಸಲಾಗಿದೆ.ತಾವು ಇಲಾಖೆಯಿಂದ ದೇವಸ್ಥಾನ ಅಭಿವೃದ್ದಿಗೆ ಅನುದಾನ ಒದಗಿಸಬೇಕು ಎಂದು ಮನವಿ ಮಾಡಿದರು. ಶಾಸಕರು ಪ್ರತಿಕ್ರಿಯಿಸಿ ಅಂದಾಜು ಮೊತ್ತ ಕ್ರಿಯಾ ಯೋಜನೆಯಂತೆ ಅನುದಾನವನ್ನು ಆದ್ಯತೆ ಮೇರೆಗೆ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷೆ ಕಲ್ಲಮ್ಮ, ಸದಸ್ಯರಾದ ಮದನ್, ಬಸವರಾಜ್, ವನಜಾಕ್ಷಿ, ರಾಘವೇಂದ್ರ, ಪಿಡಿಓ ಲೋಹಿತ್ ಕುಮಾರ್, ಮುಖಂಡರಾದ ಮಹೇಶ್ವರಪ್ಪ, ಗೋಣೇಶ್, ಸಾಹಿತಿ ಎನ್ ಟಿ ಯರ್ರಿಸ್ವಾಮಿ, ಬಿಳಿಚೋಡು ಓಮಣ್ಣ, ಹಾಲೇಕಲ್ಲು ಗೋಣೆಪ್ಪ, ಪಲ್ಲಾಗಟ್ಟೆ ಶೇಖರಪ್ಪ, ಗೌಸ್ ಅಹಮ್ಮದ್, ಅಜ್ಜಣ್ಣ, ಗಿಡ್ಡನಕಟ್ಟೆ ಕಾಂತರಾಜ್, ಗೌರಿಪುರ ನಾಗರಾಜ್, ಬಿಳಿಚೋಡು ಪೋಲೀಸ್ ಇನ್ಸ್‌ಪೆಕ್ಟರ್ ನೂರ್ ಅಹಮ್ಮದ್, ಸೇರಿದಂತೆ ಶಿಕ್ಷಕರು ಇದ್ದರು.

## ಸುಪ್ರೀಂ ಕೋರ್ಟ್ ಮೊರೆ ಹೋಗಲು...

(1ನೇ ಪುಟದಿಂದ) ಈ ಕುರಿತು ವಿಧಾನಸೌಧದಲ್ಲಿ ಇಂದು ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ, ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಬೇಕು. ಆರ್ಟಿಕಲ್ 176 ಸ್ಪಷ್ಟವಾಗಿ ಹೇಳುತ್ತದೆ ರಾಜ್ಯಪಾಲರ ಅವರು ತಯಾರು ಮಾಡುವಂತದಹದು ಓದುವಂತಹದು ಅಲ್ಲ, ಕ್ಯಾಬಿನೆಟ್ ಏನು ತಯಾರು ಮಾಡುತ್ತದೆ ಅದನ್ನು ಓದಬೇಕು.

ಜಂಟಿ ಅಧಿವೇಶನ ಜೊತೆಗೆ ವಿಶೇಷ ಅಧಿವೇಶನ ಕರಿದಿದ್ದೆವು. ಮಹತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನ ತಗೆದು, ಜಿ ರಾಮ್ ಜಿ ಹೊಸ ಕಾಯ್ದೆ ಮಾಡಿದ್ದಾರೆ. ನಮ್ಮ ಸರ್ಕಾರ ಇದನ್ನು ವಿರೋಧಿಸುತ್ತದೆ.

ರಾಜ್ಯಪಾಲರು ಕೇಂದ್ರ ಸರ್ಕಾರದ ಕೈಗೊಂಬೆಯಂತೆ ವರ್ತಿಸಿದ್ದಾರೆ, ರಾಜ್ಯಪಾಲ ಗೆಹ್ಲೋಟ್ ಸಂವಿಧಾನದ ಪ್ರಕಾರ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿಲ್ಲ. ಈ ವರ್ತನೆಯ ವಿರುದ್ಧ ನಾವು ಪ್ರತಿಭಟಿಸುತ್ತೇವೆ,ಅವರ ನಡವಳಿಕೆಯ ಕುರಿತು ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಬೇಕೆ ಎಂದು ಸರ್ಕಾರ ಪರಿಶೀಲಿಸುತ್ತದೆ ಎಂದರು.

ರಾಜ್ಯಪಾಲರು ಇಂದು ವಿಶೇಷ ಅಧಿವೇಶನ ಆರಂಭದಲ್ಲಿ ಜಂಟಿ ಸದನ ಉದ್ದೇಶಿಸಿ ಮಾತನಾಡಲು ಸದನಕ್ಕೆ ಆಗಮಿಸಿ ಕೇವಲ ಒಂದೇ ವಾಕ್ಯದಲ್ಲಿ ಭಾಷಣ ಮಾಡಿ ಮುಗಿಸಿ ನಿರ್ಗಮಿಸಿದ ನಡೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸರ್ಕಾರದ ಸಚಿವರು, ಶಾಸಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೇಂದ್ರದಲ್ಲಿ ಮೋದಿ ಸರ್ಕಾರ ವಿರುದ್ಧ ಟೀಕೆಗಳನ್ನು ಒಳಗೊಂಡಿರುವ ಕಾಂಗ್ರೆಸ್ ಸರ್ಕಾರ ರಚಿಸಿದ ಭಾಷಣದ ಪ್ಯಾರಾಗಳನ್ನು ಕೈಬಿಡದಿದ್ದರೆ, ವಿಧಾನಸಭೆಯ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವುದಿಲ್ಲ ಎಂದು ರಾಜ್ಯಪಾಲ ಗೆಹ್ಲೋಟ್ ಭಾಷಣ ಮಾಡುವುದಿಲ್ಲ ಎಂದು ಹೇಳಿದ್ದರು.

ಇಂದು ವಿಶೇಷ ಅಧಿವೇಶನ ಆರಂಭವಾಗಲಿದ್ದು, ಅಧಿವೇಶದಲ್ಲಿ ಆಡಳಿರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷ ಬಿಜೆಪಿ ನಡುವೆ ವಿಬಿ ಜಿ ರಾಮ್? ಜಿ ಯೋಜನೆ ವಿಚಾರಕ್ಕೆ ಜಟಾಪಟಿ ನಡೆಯುವ ಸಾಧ್ಯತೆ ಇದೆ.

## ಕಾಂಗ್ರೆಸ್‌ನಿಂದ ರಾಜ್ಯಪಾಲರಿಗೆ...

(1ನೇ ಪುಟದಿಂದ)

ಈ ಕಾಂಗ್ರೆಸ್ ಸರಕಾರವು ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುವ ಕೆಲಸ ಮಾಡಿದೆ. ಒಕ್ಕೂಟದ ವ್ಯವಸ್ಥೆಗೆ ಧಕ್ಕೆ ತರುವ ದಾರಿಯಲ್ಲಿ ರಾಜ್ಯ ಸರಕಾರ ಸಾಗುತ್ತಿದೆ. ಸದನದ ದುರ್ಬಳಕೆಯನ್ನೂ ರಾಜ್ಯ ಸರಕಾರ ಮಾಡಲು ಹೊರಟಿರುವುದು ದುರ್ದೈವ ಎಂದು ಟೀಕಿಸಿದರು.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ಸಿನ ಗೂಂಡಾಗಿರಿ ಕೇವಲ ರಸ್ತೆಗಳಿಗೆ ಸೀಮಿತವಾಗಿತ್ತು. ಈಗ ಅದು ಸದನ ಪ್ರವೇಶವನ್ನೂ ಮಾಡಿದೆ ಎಂದು ಆಕ್ಷೇಪಿಸಿದರು. ಗೌರವಾನ್ವಿತ ರಾಜ್ಯಪಾಲರು ಭಾಷಣ ಓದುವ ಸಂದರ್ಭದಲ್ಲಿ ಕೆಲವು ಸದಸ್ಯರು ಅವರ ಮೇಲೆ ಬಿದ್ದು ಅವರನ್ನು ಥಳಿಸುವ ಹಂತಕ್ಕೂ ಬಂದಿದ್ದುದು ಈಗಾಗಲೇ ಕೆಲವು ಮಾಧ್ಯಮಗಳಲ್ಲಿ ವರದಿಯಾಗಿದೆ; ಇದನ್ನು ನಾವು ಖಂಡಿಸುತ್ತೇವೆ ಎಂದು ತಿಳಿಸಿದರು. ಈ ಗೂಂಡಾಗಿರಿಯ ಹೊಣೆ ಹೊತ್ತು ಸಿದ್ದರಾಯ್ಯನವರು ತಕ್ಷಣ ರಾಜೀನಾಮೆ ಕೊಡಬೇಕು ಎಂದು ಒತ್ತಾಯಿಸಿದರು.

ರಾಜ್ಯಪಾಲರ ವಿರುದ್ಧ ನೀವು ಕನಿಷ್ಠ ಪ್ರಜ್ಞೆಯೂ ಇಲ್ಲದೇ ಗೂಂಡಾಗಿರಿ ಪ್ರದರ್ಶನ ಮಾಡಿರುವುದು ಅಸಾಂವಿಧಾನಿಕ. ಇದು ಸಂವಿಧಾನ ವಿರೋಧಿ. ಇವತ್ತು ರಾಜ್ಯಪಾಲರ ನಡೆ ಒಕ್ಕೂಟ ವ್ಯವಸ್ಥೆಯ ಪರವಾಗಿದೆ. ಸಂವಿಧಾನವನ್ನು ಎತ್ತಿ ಹಿಡಿಯುವ ಕೆಲಸವನ್ನು ಅವರು ಮಾಡಿದ್ದಾರೆ. ಅದನ್ನು ನಾವು ಸ್ವಾಗತಿಸುತ್ತೇವೆ ಎಂದು ತಿಳಿಸಿದರು.

## ಹರೀಶ್ ವರ್ತನೆ ಖಂಡಿಸಿ 24ಕ್ಕೆ....


(1ನೇ ಪುಟದಿಂದ) ಶಾಸಕ ಬಿ.ಪಿ.ಹರೀಶ್‌ಗೆ ಏನೋ ಆಗಿದೆ. ಅಭಿವೃದ್ಧಿ ಕೆಲಸಬಿಟ್ಟುಬರೀ ಸುಳ್ಳುಆರೋಪಮಾಡುವುದು ಅಧಿಕಾರಿಗಳಿಗೆ ಏಕವಚನದಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸುವುದು ಹಾಗೂ ಸಚಿವರನ್ನು ಟಾರ್ಗೆಟ್ ಮಾಡಿ ಮಾತನಾಡುವುದೇ ಆಗಿದೆ. ಅವರಿಗೆ ಏನೇ ಸಮಸ್ಯೆಗಳು ಇದ್ದರೆ ಅವುಗಳನ್ನು ಕಾನೂನು ರೀತಿಯಲ್ಲಿ ಬಗೆಹರಿಸಿಕೊಳ್ಳಬೇಕು. ಅವರ ವರ್ತನೆ ಸರಿಪಡಿಸಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಸರಿಯಾದ ಪಾಠ ಕಲಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಎ.ನಾಗರಾಜ್, ಅನಿತಾಬಾಯಿ ಮಾಲತೇಶ್, ಅಯೂಬ್ ಪೈಲ್ವಾನ್, ಮಂಗಳಮ್ಮ ಇತರರು ಇದ್ದರು.

## "ಯೋಗ ಮತ್ತು ಆರೋಗ್ಯ"

- ಶ್ರೀಮತಿ ಲಾವಣ್ಯ ಎಸ್. ಪಿ.

### ಶೀರ್ಷಬದ್ಧ ಮಕರಾಸನ: (ತಲೆಗೆ ಆಧಾರವಿರುವ ಮೊಸಳೆ ಭಂಗಿ)



"ಸಾಮಾನ್ಯ ಮಕರಾಸನದಲ್ಲಿ ತಲೆ ನೆಲದ ಮೇಲೆ ಇರುತ್ತದೆ ಆದರೆ ಶೀರ್ಷಬದ್ಧ ಮಕರಾಸನ ದಲ್ಲಿ ತಲೆಗೆ ಬೆಂಬಲ ನೀಡಲಾಗುತ್ತದೆ"

<u>ಅರ್ಥ:</u> ಸಂಸ್ಕೃತದಲ್ಲಿ ಶೀರ್ಷಬದ್ಧ ಅಂದರೆ "ತಲೆಯನ್ನು ಹಿಡಿದುಕೊಳ್ಳುವುದು "ಮಕರಾ ಸನ ಅಂದರೆ "ಮೊಸಳೆ ಭಂಗಿ"

<u>ಮಾಡುವ ವಿಧಾನ:</u> * ಹೊಟ್ಟೆಯ ಮೇಲೆ ಮಲಗಿ, ಹಣೆಯನ್ನು ನೆಲದ ಮೇಲೆ ಇರಿಸಿ. * ಉಸಿರನ್ನು ಬಿಡುತ್ತಾ ತಲೆ, ಕಾಲು ಮತ್ತು ಮೇಲಿನ ದೇಹವನ್ನು ಸ್ವಲ್ಪ ಮೇಲೆತ್ತಿ. * ಈ ಸ್ಥಿತಿಯಲ್ಲಿ ಕೈಗಳನ್ನು ತಲೆಯ ಹಿಂಭಾಗಕ್ಕೆ ತಂದು, ಎರಡು ಕೈಗಳಿಂದ ತಲೆಯ ಹಿಂಭಾಗವನ್ನು ಹಿಡಿಯಬೇಕು. * ಕಾಲುಗಳನ್ನು ಸ್ವಲ್ಪ ಅಗಲವಾಗಿ ಇರಿಸಿ, ಪಾದಗಳು ಹೊರಮುಖವಾಗಿ ಇರಲಿ. * ಈ ಭಂಗಿಯಲ್ಲಿ ಸುಮಾರು 30 ಸೆಕೆಂಡುಗಳ ಕಾಲ ನಿಧಾನವಾಗಿ ಉಸಿರಾಡಿ.

<u>ಮುಕ್ತಾಯ:</u> ನಿಧಾನವಾಗಿ ಎರಡು ಕೈಗಳನ್ನು ಬಿಡಿಸಿಕೊಂಡು, ಮಕರಾಸನ ಸ್ಥಿತಿಗೆ ಬಂದು ವಿಶ್ರಾಂತಿ ಪಡೆಯಿರಿ.

<u>ಉಪಯೋಗಗಳು:</u> * ಭುಜಗಳು ಮತ್ತು ಬೆನ್ನಿಗೆ ಆಳವಾದ ವಿಶ್ರಾಂತಿ ನೀಡುತ್ತದೆ. * ಆಯಾಸ ತಲೆನೋವನ್ನು ನಿವಾರಿಸಿ ದೇಹಕ್ಕೆ ಶಕ್ತಿ ಕೊಡುತ್ತದೆ. * ಸ್ಲಿಪ್ ಡಿಸ್ಕ್, ಸಯಾಟಿಕ, ಮತ್ತು ಬೆನ್ನು ನೋವಿಗೆ ಚಿಕಿತ್ಸೆ ನೀಡುತ್ತದೆ. * ದೇಹದ ಸ್ನಾಯುಗಳನ್ನು ಸಂಪೂರ್ಣವಾಗಿ ಸಡಿಲಗೊಳಿಸಿ, ಶಕ್ತಿ ತುಂಬುತ್ತದೆ.

<u>ಗಮನಿಸಿ:</u> ಗರ್ಭಿಣಿಯರು, ಹೆಪ್ಪುಗಟ್ಟಿದ ಭುಜದ ಸಮಸ್ಯೆ ಇರುವವರು ಇದನ್ನು ಮಾಡಬಾರದು. ಇದು ಶವಾಸನಕ್ಕಿಂತಲೂ ಭಿನ್ನವಾಗಿದ್ದು, ಮೆದುಳಿಗೆ ಹೆಚ್ಚು ಜಾಗೃತಿ ನೀಡುತ್ತದೆ.

ಯೋಗಾಸನಗಳನ್ನು ಯೋಗ ಶಿಕ್ಷಕರ ಮಾರ್ಗದರ್ಶನದಲ್ಲಿ ಮಾಡಬೇಕು. ಪತ್ರಿಕೆ ಓದಿ ಸ್ವಯಂ ಅಭ್ಯಾಸ ಒಳ್ಳೆಯದಲ್ಲ

## ದಾವಣಗೆರೆಯಿಂದ ಧರ್ಮಸ್ಥಳಕ್ಕೆ ಸೈಕ್ಲಿಂಗ್



ದಾ ನಗರವಾಣಿ ಸುದ್ದಿ

ದಾವಣಗೆರೆ: ದಾವಣಗೆರೆ ಬೈಸಿಕಲ್ ಕ್ಲಬ್' ವತಿಯಿಂದ ದಾವಣಗೆರೆಯಿಂದ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಸೈಕ್ಲಿಂಗ್ ಯಾತ್ರೆಯನ್ನು ಆಯೋಜಿಸಿದ್ದು, ಜ.24ರಂದು ಶನಿವಾರ ಬೆಳಿಗ್ಗೆ 2.45ಕ್ಕೆ ಜಯದೇವ ಸರ್ಕಲ್‌ನಿಂದ ಆರಂಭಿಸಿ ಸಂತೆಬೆನ್ನೂರು, ಚನ್ನಗಿರಿ, ಅಜ್ಜಂಪುರ, ಕಡೂರು, ಬೀರೂರು, ಚಿಕ್ಕಮಗಳೂರು, ಮೂಡಿಗೆರೆ, ಕೊಟ್ಟಿಗೆಹಾರ, ಚಾರ್ಮುಡಿ ಘಾಟ್, ಮೂಲಕ ಶ್ರೀ ಕ್ಷೇತ್ರ ಧರ್ಮಸ್ಥಳವನ್ನು ಜ.25ರ ಭಾನುವಾರ ತಲುಪಲಾಗುವುದು ಎಂದು ದಾವಣಗೆರೆ ಬೈಸಿಕಲ್ ಕ್ಲಬ್‌ನ ಅಧ್ಯಕ್ಷರಾದ ರಾಜೇಂದ್ರ ಪ್ರಸಾದ್ ತಿಳಿಸಿದ್ದಾರೆ

ಕಾರ್ಯದರ್ಶಿ ಕೆ.ಎಸ್. ಮಹೇಶ್, ಡಾ॥ ಸುರೇಶ್, ಡಾ॥ ನವೀನ್, ಡಾ॥ ಪಾಟೀಲ್ ಡಾ॥ ಮಾಲತೇಶ್, ಡಾ॥ಶಿವಕುಮಾರ, ಡಾ॥ ರಾಘವೇಂದ್ರ, ದೇವರಾಜ್, ವಿಜಯ್ ಭಟ್, ದಿನೇಶ್ ಜೈನ್, ಪ್ರಸಾದ್, ಯೋಗೇಶ್, ಸುರೇಶ್ ಸವನೂರ್, ವಿಕಾಸ್, ನಾಗರಾಜ್ ಇನ್ನು ಮುಂತಾದವರು ಒಟ್ಟು 20 ಜನ ಸೈಕ್ಲಿಸ್ಟ್‌ಗಳು ಸುಮಾರು 252 ಕಿಲೋಮೀಟರ್ ಹಾದಿಯನ್ನು ಸೈಕ್ಲಿಂಗ್ ಮೂಲಕ ಕ್ರಮಿಸಿ ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ದರ್ಶನ ಮಾಡಿ ಹಿಂತಿರುಗಲಿದ್ದಾರೆ ಎಂದು ದಾವಣಗೆರೆ ಬೈಸಿಕಲ್ ಕ್ಲಬ್‌ನ ಕಾರ್ಯದರ್ಶಿ ಮಹೇಶ್ ತಿಳಿಸಿದ್ದಾರೆ.

## ಗೌರ್ನರ್ ಭಾಷಣ; ಸದನ...

(1ನೇ ಪುಟದಿಂದ) ಸರ್ಕಾರ ಸಿದ್ಧಪಡಿಸಿದ ಭಾಷಣ ಓದಲು ರಾಜ್ಯಪಾಲರ ನಿರಾಕರಣೆ ಮಾಡಿದ್ದು ಸಂವಿಧಾನಕ್ಕೆ ವಿರುದ್ಧವಾದ ನಡೆ ಎಂದು ಆಕ್ರೋಶ ವ್ಯಕ್ತಪಡಿಸಿದ ಬಿಕೆ ಹರಿಪ್ರಸಾದ್, ಭಾಷಣವನ್ನು ಓದುವಂತೆ ರಾಜ್ಯಪಾಲರನ್ನು ಒತ್ತಾಯಿಸುತ್ತಿರುವುದನ್ನು ಕರ್ನಾಟಕ ವಿಧಾನಸಭೆ ಕ್ಯಾಮರಾಗಳಲ್ಲಿ ಸೆರೆಯಾಗಿದೆ.

ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯ ಬಿಕೆ ಹರಿಪ್ರಸಾದ್ ಅವರು ತುಂಬಾ ಆಕ್ರೋಶಿತರಾಗಿ ರಾಜ್ಯಪಾಲರೊಂದಿಗೆ ವಾಗ್ವಾದ ನಡೆಸಿದ್ದು, ಅವರು ವಿಧಾನಮಂಡಲದಿಂದ ಹೊರಹೋಗದಂತೆ ಅಡ್ಡ ನಿಂತು ತಡೆಯಲೆತ್ನಿಸಿದರು. ಈ ವೇಳೆ ಕೂಡಲೇ ಮಧ್ಯಪ್ರವೇಶಿಸಿದ ಮಾರ್ಷಲ್‌ಗಳು ಬಿಕೆ ಹರಿಪ್ರಸಾದ್ ಅವರನ್ನು ದೂರ ತಳ್ಳಿ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ದಾರಿ ಮಾಡಿಕೊಟ್ಟರು.

ಇದಕ್ಕೂ ಮೊದಲು ಹೊರಹೋಗುತ್ತಿದ್ದ ರಾಜ್ಯಪಾಲರ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದ ಕಾಂಗ್ರೆಸ್ ಸದಸ್ಯರು, ಸಂವಿಧಾನಕ್ಕೆ ಅಪಚಾರ ಸಹಿಸುವುದಿಲ್ಲ ಎಂದು ಗುಡುಗಿದರು. ಆ ಬಳಿಕ ಬಾಗಿಲ ಬಳಿ ಥಾವರ್ ಚಂದ್ ಗೆಹ್ಲೋಟ್ ಅವರನ್ನು ತಡೆಯಲೆತ್ನಿಸಿದ ಬಿಕೆ ಹರಿ ಪ್ರಸಾದ್ ಅವರನ್ನು, ಮಾರ್ಷಲ್‌ಗಳು ದೂರ ತಳ್ಳಿದರು.

ಬಳಿಕ ವಿಧಾನಸಭೆ ಮೊಗಸಾಲೆಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಬಿಕೆ ಹರಿಪ್ರಸಾದ್, "ಸಚಿವ ಸಂಪುಟ ಸಿದ್ಧಪಡಿಸಿದ ಭಾಷಣವನ್ನು ತಿರಸ್ಕರಿಸುವ ಅಧಿಕಾರ ರಾಜ್ಯಪಾಲರಿಗೆ ಇಲ್ಲ. ಬಿಜೆಪಿ ನೇಮಿಸಿದ ರಾಜ್ಯಪಾಲರು ಮುಖ್ಯಮಂತ್ರಿಗಳನ್ನು ಅವಮಾನಿಸುವುದು ಒಂದು ಫ್ಯಾಷನ್ ಆಗಿದೆ" ಎಂದು ಕಿಡಿಕಾರಿದರು. ಈ ವೇಳೆ ಬಿಜೆಪಿ ಶಾಸಕರು ನನ್ನ ಬಟ್ಟೆ ಹರಿದಿದ್ದಾರೆ ಎಂದು ಬಿಕೆ ಹರಿಪ್ರಸಾದ್ ಆರೋಪ ಮಾಡಿದರು.


ಇನ್ನು ಭಾಷಣ ಮಾಡಲು ರಾಜ್ಯಪಾಲರು ನಿರಾಕರಿಸಿದ್ದನ್ನು ಖಂಡಿಸಿರುವ ಸಚಿವ ಪ್ರಿಯಂಕ್ ಖರ್ಗೆ, "ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವುದು ರಾಜ್ಯಪಾಲರ ಸಾಂವಿಧಾನಿಕ ಕರ್ತವ್ಯ. ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಓದುವುದಿಲ್ಲ ಎಂದು ಅವರು ಹೇಳಲು ಬರುವುದಿಲ್ಲ. ರಾಜ್ಯಪಾಲರ ಕಚೇರಿ ಬಿಜೆಪಿ ಕಚೇ–ರಿಯಾಗಿದೆಯೇ?" ಎಂದು ಖಾರವಾಗಿ ಪ್ರಶ್ನಿಸಿದರು.


## ಸಿಎಂ ಖುರ್ಚಿ ಗುದ್ದಾಟ: 'ನಮ್ಮ ...

(1ನೇ ಪುಟದಿಂದ)

ನಾನು ಯಾವಾಗಲೂ ಧನಾತ್ಮಕವಾಗಿರುತ್ತೇನೆ, ನಾನು ಭರವಸೆಯ ಮೇಲೆ ಬದುಕುತ್ತೇನೆ, ಕಠಿಣ ಪರಿಶ್ರಮ ಯಾವಾಗಲೂ ಫಲ ನೀಡುತ್ತದೆ, ನಾನು ಅದನ್ನು ಸಂಪೂರ್ಣವಾಗಿ ನಂಬುತ್ತೇನೆ. ನನ್ನ ನಾಯಕ ಖಂಡಿತವಾಗಿಯೂ ನನ್ನನ್ನು ನಿರಾಸೆಗೊಳಿಸುವುದಿಲ್ಲ ಎಂದು ನಾನು ಭಾವಿಸುತ್ತೇನೆ' ಎಂದು ಶಿವಕುಮಾರ್ ಹೇಳಿದರು.

ಅವರ ಪಾಳಯದಲ್ಲಿ ಸಾಕಷ್ಟು ಶಾಸಕರಿಲ್ಲ ಎಂಬ ಬಗ್ಗೆ ಪ್ರಶ್ನಿಸಿದ್ದಕ್ಕೆ, 'ಯಾರು ಹೇಳಿದ್ದು? ನನಗೆ 140 ಶಾಸಕರ ಬೆಂಬಲ ಇದೆ. ನಾನು ಪಕ್ಷಕ್ಕೆ (ಕರ್ನಾಟಕದಲ್ಲಿ) ಅಧ್ಯಕ್ಷನಾಗಿದ್ದೇನೆ. ಸಂಖ್ಯಾಬಲದ ಮೇಲೆ ತೀರ್ಮಾನವಾಗುವುದಿಲ್ಲ, ನಾವೆಲ್ಲರೂ ಒಂದು ತಂಡವಾಗಿ ಕೆಲಸ ಮಾಡುತ್ತೇವೆ. ಸಿದ್ದರಾಮಯ್ಯನವರಿಗೆ 140, ನನಗೆ 140 ಮಂದಿಯ ಬೆಂಬಲವಿದೆ. ನಾವಿಬ್ಬರೂ ಕುಳಿತು ಚರ್ಚಿಸಿದ್ದೇವೆ. ಅದನ್ನು ಕೇಂದ್ರ ನಾಯಕತ್ವಕ್ಕೆ ಬಿಟ್ಟಿದ್ದೇವೆ ಮತ್ತು ಅದರಂತೆ ನಡೆದುಕೊಳ್ಳುತ್ತೇವೆ' ಎಂದು ಹೇಳಿದರು. ಕರ್ನಾಟಕ ವಿಧಾನಸಭೆಯಲ್ಲಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಒಟ್ಟು 140 ಶಾಸಕರನ್ನು ಹೊಂದಿವೆ.

**ವಸಂತ** 4K DOLBY ATMOS
ದಿನ 3 ಆಟಗಳು
23.01.2026ರಿಂದ ಪ್ರಾರಂಭ
Tickets are available in bookmyshow
ಹಿಂದಿ ಚಿತ್ರ
ಸಮಯ: ಮಧ್ಯಾಹ್ನ: 1.45ಕ್ಕೆ ಸಂಜೆ: 5.45ಕ್ಕೆ, ರಾತ್ರಿ: 9.15ಕ್ಕೆ



**ಅಶೋಕ** DOLBY DIGITAL dts
ದಿನ 4 ಆಟಗಳು
23.01.2026ರಿಂದ ಪ್ರಾರಂಭ
ticket avabale bookmyshow
ಕನ್ನಡ ಚಿತ್ರ
ಸಮಯ: ಬೆಳಿಗ್ಗೆ 11ಕ್ಕೆ, ಮಧ್ಯಾಹ್ನ:2ಕ್ಕೆ ಸಂಜೆ: 6ಕ್ಕೆ, ರಾತ್ರಿ: 9ಕ್ಕೆ

ಗೋಲ್ಡನ್ ಕ್ಲಾಸ್: 250 ರೂ, ಬಾಲ್ಕನಿ: 200 ರೂ, ಫಸ್ಟ್ ಕ್ಲಾಸ್: 150 ರೂ

**ಗೀತಾಂಜಲಿ** DOLBY DIGITAL dts
ದಿನ 4 ಆಟಗಳು
23.01.2026ರಿಂದ ಪ್ರಾರಂಭ
ಕನ್ನಡ ಚಿತ್ರ
ಬೆ: 11–ಕ್ಕೆ, ಮ: 2–ಕ್ಕೆ ಸಂ: 6–ಕ್ಕೆ: ರಾ–9–ಕ್ಕೆ


ದುನಿಯಾ ವಿಜಯ್, ರಚಿತಾ ರಾಮ್ ಅಭಿನಯದ: **ಲ್ಯಾಂಡ್ ಲಾರ್ಡ್**

# ಕುಂದವಾಡ ಕೆರೆ ಸುಂದರ, ವಾಯುವಿಹಾರಕ್ಕೆ ಉಪಯುಕ್ತ; ಡಾ; ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ; ಜನವರಿ 22 : ಕುಂದವಾಡ ಕೆರೆಯು ದಾವಣಗೆರೆಯ ಹೃದಯ ಭಾಗವಾಗಿದ್ದು, ಅತ್ಯಂತ ಸುಂದರ ಮತ್ತು ಆರೋಗ್ಯಕರ ವಾಯುವಿಹಾರಕ್ಕೆ ಕೆರೆ ತುಂಬಾ ಉಪಯುಕ್ತವಾದ ಸ್ಥಳವಾಗಿದೆ ಎಂದು ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ಕುಂದವಾಡ ಕೆರೆಯಲ್ಲಿ ಮಹಾನಗರ ಪಾಲಿಕೆ ಹಾಗೂ ಎಸ್.ಎಸ್.ಕೇರ್ ಟ್ರಸ್ಟ್ ಇವರ ಸಹಯೋಗದಲ್ಲಿ ನಗರದಲ್ಲಿ ಸ್ವಚ್ಛ ಭಾರತ ಅಭಿಯಾನ 2 ಎಸ್.ಬಿ.ಎಮ್ ಅಡಿಯಲ್ಲಿ ಸ್ವಚ್ಛ ಹಾಗೂ ಆರೋಗ್ಯಕರ ದಾವಣಗೆರೆಗಾಗಿ ಜನಜಾಗೃತಿ ಮೂಡಿಸಲು ಸ್ವಚ್ಛತೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ನಂತರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ನಮ್ಮ ದಾವಣಗೆರೆ ನಗರವು ಸ್ವಚ್ಛ ಸರ್ವೇಕ್ಷಣೆ-2024 ರಲ್ಲಿ ರಾಜ್ಯದಲ್ಲಿ ಮೊದಲ ಸ್ಥಾನ, ದೇಶದಲ್ಲಿ 32ನೇ ಸ್ಥಾನ ಪಡೆದಿರುವುದು, ಅತ್ಯಂತ ಹೆಮ್ಮೆಯ ವಿಷಯ. ಕುಂದವಾಡ ಕೆರೆಯ ಗ್ಲಾಸ್‌ಹೌಸ್ ಪ್ರವೇಶಧ್ವಾರದ ಬಳಿ ಬಹುದಿನಗಳ ಜನಗಳ ಬೇಡಿಕೆ ಇದ್ದ ಸುಸರ್ಜಿತ ಶೌಚಾಲಯ ನಿರ್ಮಿಸಲು ಶಂಕುಸ್ಥಾಪನೆ ಮಾಡಿ ಮಾತನಾಡಿ, ನಾವು ದೇಶದಲ್ಲಿ ಮೊದಲನೇ ಸ್ಥಾನವನ್ನು ಪಡೆಯುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು. ನಮ್ಮ ಎಸ್.ಎಸ್.ಕೇರ್ ಟ್ರಸ್ಟ್ ಮತ್ತು ಬಾಪೂಜಿ ವಿದ್ಯಾಸಂಸ್ಥೆಯ 9 ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಪಾಲಿಕೆ ಜೊತೆಗೂಡಿ ಕುಂದವಾಡ ಕೆರೆಯನ್ನು ಸ್ವಚ್ಛತೆಗೊಳಿಸಿದ್ದಾರೆ. ಎಲ್ಲಾ ಮುಖ್ಯಸ್ಥರಿಗೂ ಹಾಗೂ ವಿದ್ಯಾರ್ಥಿಗಳ ಮೆಚ್ಚುವ ಕಾರ್ಯ ಇದಾಗಿದೆ. ಇದೇ ರೀತಿ ಪ್ರತಿ ತಿಂಗಳಿಗೆ ಒಮ್ಮೆ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸಿ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಹೆಚ್ಚಿನ ಅಭಿವೃದ್ದಿ ಕಾರ್ಯಗಳನ್ನು ಕೈಗೊಳ್ಳುವುದಾಗಿ ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪಾಲಿಕೆಯ ಆಯುಕ್ತರಾದ ರೇಣುಕಾ ಸ್ವಚ್ಚ ಭಾರತ ಅಭಿಯಾನ 2.0 ರಡಿ ಐ.ಇ.ಸಿ. ಅಡಿಯಲ್ಲಿ ನಾವು ನಗರದ ವಿವಿಧ ಭಾಗಗಳಲ್ಲಿ ಕಾರ್ಯಕ್ರಮವನ್ನು ಮಾಡುತ್ತಿದ್ದು, ಅದರಲ್ಲಿ ಎಸ್.ಎಸ್.ಕೇರ್ ಟ್ರಸ್ಟ್‌ನ ಸಹಯೋಗದಲ್ಲಿ ಸುಮಾರು 4.5 ಕೀಲೋಮೀಟರ್ ಸುತ್ತಳತೆ ಇರುವ ಕುಂದವಾಡ ಕೆರೆಯ ಸ್ವಚ್ಛತೆ ಮಾಡಲಾಗಿದೆ.

ಸ್ವಚ್ಛ ದಾವಣಗೆರೆ, ಸ್ವಚ್ಛ ಸುಂದರ ದಾವಣಗೆರೆ ನಿರ್ಮಾಣಕ್ಕಾಗಿ ನಾನು ಪಾಲಿಕೆಯೊಂದಿಗೆ ಕೈಜೋಡಿಸುತ್ತೇನೆ ಎಂದು ಸಹಿ ಸಂಗ್ರಹಣಾ ಅಭಿಯಾನದ ಫಲಕಕ್ಕೆ ಪರಿವರ್ತನಾ ಟ್ರಸ್ಟ್‌ನ ಮುಖ್ಯಸ್ಥರಾದ ಶಾಂತಾಭಟ್ ಅವರಿಂದ ಸಹಿ ಪಡೆಯುವ ಮೂಲಕ ಚಾಲನೆ ನೀಡಲಾಯಿತು.

ಪರಿಸರ ಅಭಿಯಂತರಾದ ಬಸವಣ್ಣ ಅವರು ಸ್ವಚ್ಛತಾ ಪ್ರತಿಜ್ಞೆ ವಿಧಿ ಬೋಧಿಸಿದರು. ನಂತರ ಪಾಲಿಕೆಯಲ್ಲಿ ಉತ್ತಮ ಕಾರ್ಯನಿರ್ವಹಿಸಿದಂತಹ ಪೌರಕಾರ್ಮಿಕರನ್ನು ಮತ್ತು ಆರೋಗ್ಯ ನಿರೀಕ್ಷಕರಿಗೆ ಕೈ ಗಡಿಯಾರ ವಿತರಿಸಿ ಅವರನ್ನು ಸನ್ಮಾನಿಸಿದರು.

ಸ್ವಚ್ಛತೆ ಕಾರ್ಯಕ್ರಮದಲ್ಲಿ ತೊಡಗಿದ 9 ಕಾಲೇಜಿನ ವಿದ್ಯಾರ್ಥಿಗಳಿಗೂ ಉತ್ತಮ ಕಾರ್ಯ ನಿರ್ವಹಿಸಿದ ಕಾಲೇಜಿಗೆ ಬಹುಮಾನ ವಿತರಿಸಿದರು.

ಕಾರ್ಯಪಾಲಕ ಅಭಿಯಂತರಾದ ಉದಯ ಕುಮಾರ, ಕಿರಿಯ ಆರೋಗ್ಯ ನಿರೀಕ್ಷಕರು ಮಲ್ಲಿಕಾ, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಜಗದೀಶ, ಕುಂದವಾಡ ಕೆರೆಯ ವಾಯುವಿಹಾರಿಗಳ ಸಂಘದ ಮುಖ್ಯಸ್ಥರು, ಸದಸ್ಯರು, ಮತ್ತು ಕಾರ್ಯಕ್ರಮ ಆಯೋಜಿಸಿದ ವಾಹಿನಿ ಅಭಿವೃದ್ದಿ ಸಂಸ್ಥೆಯ ಸದಸ್ಯರು, ಮಹಾನಗರ ಪಾಲಿಕೆಯ ಅಧಿಕಾರಿ ಸಿಬ್ಬಂದಿಗಳು ಮತ್ತು ಪೌರಕಾರ್ಮಿಕರು ಹಾಜರಿದ್ದರು.

## ಕಾವ್ಯಗೆ ಆರನೇ ರ್‍ಯಾಂಕ್



ದಾ ನಗರವಾಣಿ ಸುದ್ದಿ

ದಾವಣಗೆರೆ: ದಾವಣಗೆರೆ ವಿಶ್ವವಿದ್ಯಾನಿಲಯದ 2024-25 ನೇ ಸಾಲಿನ ಫಲಿತಾಂಶದಲ್ಲಿ ಎಂಇಎಸ್ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿನಿ ಎಸ್ ಎಸ್ ಕಾವ್ಯ ಅವರು ಶೇಕಡ 88.70 ಪಡೆದು ಆರನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಕಾವ್ಯ ಅವರಿಗೆ ಎಂಇಎಸ್ ಶಿಕ್ಷಣ ಮಹಾವಿದ್ಯಾಲಯದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಆಡಳಿತಾಧಿಕಾರಿಗಳು, ಸದಸ್ಯರು, ಪ್ರಾಂಶುಪಾಲರು, ಉಪನ್ಯಾಸಕರು ಅಭಿನಂದಿಸಿದ್ದಾರೆ.

ಪತ್ರಿಕೆಗಳಿಗೆ ಸಂಪರ್ಕಿಸಿ 08192-254186

# ಮಕ್ಕಳಿಗೆ ಪಾಠ ಓದಿಸಿದ ಸಂಸದರು



ದಾ ನಗರವಾಣಿ ಸುದ್ದಿ

ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಗುರುವಾರ ದಾವಣಗೆರೆ ತಾಲ್ಲೂಕಿನ ಲೋಕಿಕೆರೆ ಗ್ರಾಮದಲ್ಲಿ ನಡೆದ ದೇವಸ್ಥಾನಗಳ ಕಳಸಾರೋಹಣ ಸಮಾರಂಭದಲ್ಲಿ ಭಾಗವಹಿಸಿ ನಗರಕ್ಕೆ ಹಿಂದಿರುಗುತ್ತಿರುವ ಸಂದರ್ಭ ದಲ್ಲಿಮಾರ್ಗಮಧ್ಯೆಯರವನಾಗ್ತಿಹಳ್ಳಿಕ್ಯಾಂಪಿನಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು.

ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಅವಲೋಕಿಸಿದರು ಮತ್ತು ತಮ್ಮ ಅಮೂಲ್ಯ ಸಮಯವನ್ನು ಮಕ್ಕಳೊಂದಿಗೆ ಕಳೆದರು. ಶಾಲಾ ದಾಖಲಾತಿಯನ್ನು ಹೆಚ್ಚಿಸಿಕೊಳ್ಳುವ ಬಗ್ಗೆ, ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವಂತೆ ಸಲಹೆ ನೀಡಿದರು.

ಶಾಲೆಯ ಭೌತಿಕ ಪರಿಸರವನ್ನು ಉತ್ತಮಗೊಳಿಸಲು ನೆರವು ನೀಡುವ ಬಗ್ಗೆ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕಿ ಶ್ರೀಮತಿ ಪಾವನಿ ಹಾಗೂ ಶಿಕ್ಷಕಿ ಶ್ವೇತಾ ಕೆ.ಎಲ್ ಇದ್ದರು.

# ಜಗಳೂರು: ಹಾಸ್ಟೆಲ್‌ಗೆ ಲೋಕಾಯುಕ್ತ ತಂಡ ಭೇಟಿ ಸಮಸ್ಯೆಗಳ ಸರಮಾಲೆ ಬಿಚ್ಚಿಟ್ಟ ವಿದ್ಯಾರ್ಥಿಗಳು



ದಾ.ನಗರವಾಣಿ ಸುದ್ದಿ

ಜಗಳೂರು, ಜ.22: ಪಟ್ಟಣದ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಕ್ಕೆ ಸಾರ್ವಜನಿಕರ ದೂರಿನ ಹಿನ್ನೆಲೆ ಲೋಕಾಯುಕ್ತ ಪೋಲೀಸ್ ಉಪನಿರೀಕ್ಷಕ ಗುರುಬಸಪ್ಪ ಅವರ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು. ಈ ವೇಳೆ ವಿದ್ಯಾರ್ಥಿಗಳು ಸಮಸ್ಯೆಗಳ ಸರಮಾಲೆ ಬಿಚ್ಚಿಟ್ಟರು.

ಮಕ್ಕಳಿಂದ ಮಾಹಿತಿ ಪಡೆದ ವೇಳೆ ವಸತಿ ನಿಲಯದ ವಿದ್ಯಾರ್ಥಿಗಳ ಸ್ನಾನಕ್ಕೆ ಬಿಸಿನೀರು, ಕುಡಿಯುವ ನೀರು ಪೂರೈಸಿಲ್ಲ. ಮೆನು ಚಾರ್ಟ್ ಪ್ರಕಾರ ಊಟ, ತಿಂಡಿ ಕೊಡುತ್ತಿಲ್ಲ. ಸಮರ್ಪಕವಾಗಿ ಸರ್ಕಾರದ ಸೌಲಭ್ಯಗಳು ತಲುಪುತ್ತಿಲ್ಲ. ಪೋಷಕರನ್ನು ತೊರೆದು ಕಲಿಯುವ ಆಸಕ್ತಿಯಿಂದ ವಿದ್ಯಾರ್ಥಿ ನಿಲಯಕ್ಕೆ ಸೇರಿದ್ದೇವೆ. ನಮಗೆ ಸೌಲಭ್ಯಗಳಿಲ್ಲ ಎಂದು ಅಳಲು ತೋಡಿಕೊಂಡರು.

ಪ್ರತಿನಿತ್ಯ ಅನ್ನ ಸಾಂಬಾರು ಒಂದೇ ಬಿಟ್ಟರೆ ಬೇರೆ ಏನು ಕೊಡುತ್ತಿಲ್ಲ. ಗುಣಮಟ್ಟದ ಆಹಾರ ಪೂರೈಕೆ ಮಾಡುತ್ತಿಲ್ಲ. ವಿದ್ಯಾರ್ಥಿನಿಲಯದಲ್ಲಿ 40 ಜನ ಮಾತ್ರ ಇರುತ್ತೇವೆ ಆದರೆ 65 ವಿದ್ಯಾರ್ಥಿಗಳ ಹಾಜರಾತಿ ತೋರಿಸಲು ಅಡುಗೆ ತಯಾರಿಕರಿಂದ ಬಯೋಮೆಟ್ರಿಕ್ ಕೊಡಿಸುತ್ತಾರೆ ಎಂದು ವಿದ್ಯಾರ್ಥಿಗಳು ಲೋಕಾಯುಕ್ತರ ಮುಂದೆ ತಮ್ಮ ಸಮಸ್ಯೆಗಳನ್ನು ಬಿಚ್ಚಿಟ್ಟರು.

ಖಾಯಂ ವಾರ್ಡನ್ ಬೇಕು: ಖಾಯಂ ನಿಲಯ ಮೇಲ್ವಿಚಾರಕ ಇಲ್ಲದೇ ಇರುವುದರಿಂದ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ದ್ವಿತೀಯ ದರ್ಜೆ ಸಹಾಯಕರನ್ನು ವಾರ್ಡನ್ ಹುದ್ದೆಗೆ ನಿಯೋಜಿಸಲಾಗಿದೆ. ವಾರ್ಡನ್ ವಿದ್ಯಾರ್ಥಿ ನಿಲಯಕ್ಕೆ ಬರುವುದೇ ಇಲ್ಲ ಎಂದು ವಿದ್ಯಾರ್ಥಿಗಳು ದೂರಿದರು.

ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಿದ ಲೋಕಾಯುಕ್ತ ಇನ್ಸ್‌ಪೆಕ್ಟರ್ ಸರ್ಕಾರ ನೀಡುವಂತ ಸೌಲಭ್ಯಗಳನ್ನು ಅರ್ಹ ಪಲಾನುಭಗಳಿಗೆ ನೀಡಬೇಕು ನೀವು ಮಾಡುತ್ತಿರುವುದು ಸರಿಯಲ್ಲ. ಸ್ಟಾಕ್ ರಿಜಿಸ್ಟರ್ ಸೇರಿದಂತೆ ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ಕಚೇರಿಗೆ ಬನ್ನಿ ಎಂದು ನಿಲಯ ಮೇಲ್ವಿಚಾರಕರಿಗೆ ಖಡಕ್ ಸೂಚನೆ ನೀಡಿ ತೆರಳಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕ ಉಮೇಶ್, ಲೋಕಾಯುಕ್ತ ಪೊಲೀಸ್ ಸಿಬ್ಬಂದಿಗಳು ಹಾಜರಿದ್ದರು.

# ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಕುಕಿಂಗ್ ಆ್ಯಕ್ಟಿವಿಟಿ



ದಾ ನಗರವಾಣಿ ಸುದ್ದಿ

ದಾವಣಗೆರೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಹಾಗೂ ಶ್ರೀ ಸಿದ್ದಗಂಗಾ ಸ್ಥಳೀಯ ಸಂಸ್ಥೆ ದಾವಣಗೆರೆ ವತಿಯಿಂದ ಸ್ಥಳೀಯ ಸಂಸ್ಥೆಯ 121 ಸ್ಕೌಟ್ ಮತ್ತು 66 ಗೈಡ್ಸ್ ವಿದ್ಯಾರ್ಥಿಗಳಿಗೆ ಕುಕ್ಕಿಂಗ್ ಪ್ರಾವಿಣ್ಯತಾ ಪದಕ ಪಡೆಯಲು ಕುಕಿಂಗ್ ಆ್ಯಕ್ಟಿವಿಟಿ ಹಮ್ಮಿಕೊಳ್ಳಲಾಗಿತ್ತು,

ಶ್ರೀಮತಿ ರೇಖಾರಾಣಿ ಕೆ ಎಸ್ ಹಸಿರು ನಿಶಾನೆ ತೋರಿಸುವುದರ ಮೂಲಕ ವಿದ್ಯಾರ್ಥಿಗಳ ಫೂಟ್ ಹೈಕ್‌ಗೆ ಚಾಲನೆ ನೀಡಿದರು. ಹೈಕಿಂಗ್ ಮೂಲಕ ಆನಗೋಡಿನ ಸಿದ್ಧೇಶ್ವರ ಪ್ರೌಢಶಾಲಾ ಆವರಣ ತಲುಪಿದ ವಿದ್ಯಾರ್ಥಿಗಳು ಧ್ವಜಾರೋಹಣದ ಬಳಿಕ ತಮ್ಮ ತಮ್ಮ ದಳಗಳ ಪ್ಯಾಟ್ರೋಲ್ ಗುಂಪುಗಳಲ್ಲಿ ಸೌದೆ ಒಲೆಗಳ ಮೇಲೆ ಅವಲಕ್ಕಿ, ಮಂಡಕ್ಕಿ, ಈರುಳ್ಳಿ ಬಜ್ಜಿ, ಮೆಣಸಿನಕಾಯಿ, ಚಪಾತಿ ಬೆಂಡೆಕಾಯಿ ಪಲ್ಯ, ತಾಳಿಪಟ್ಟು, ಪನ್ನೀರ್ ರೋಲ್, ಗೋಬಿಮಂಚೂರಿ, ಪುದೀನಾ ರೈಸ್, ಶಾವಿಗೆ ಪಾಯಸ, ಶರಬತ್ತು, ಬಾದಾಮಿ ಹಾಲು, ಟೀ, ಕಾಫಿ, ಇನ್ನಿತರೆ ಖಾದ್ಯಗಳನ್ನು ತುಂಬಾ ರುಚಿಕರವಾಗಿ ಉತ್ಸಾಹದಿಂದ ತಯಾರಿಸಿದರು.

ಅಡುಗೆ ಮಾಡುವ ಕೌಶಲಗಳನ್ನು ತಿಳಿದುಕೊಂಡರು. ನಂತರ ಆನಗೋಡಿನ ಬಳಿ ಇರುವ ಶಿಕ್ಷಣ ಶಿಲ್ಪಿ ಎಂ ಎಸ್ ಶಿವಣ್ಣ ಶಿಲಾ ಸ್ಮಾರಕದ ಬಳಿ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್ಸ್‌ಗಳಾದ ಶ್ರೀನಿವಾಸ್ ಎನ್ ಎಲ್ (ಹೆಚ್ ಡಬ್ಲ್ಯೂ ಬಿ), ಆರೋಗ್ಯಮ್ಮ (ಹೆಚ್ ಡಬ್ಲ್ಯೂ ಬಿ), ತನುಜಾ (ಅಡ್ವಾನ್ಸ್ ಡ್) ಹಾಗೂ ಗೈಡ್ ಕ್ಯಾಪ್ಟನ್ಸ್ ಸುನಿ ತಾ ಕೆ ಎಂ (ಹೆಚ್ ಡಬ್ಲ್ಯೂ ಬಿ), ಸುನಿತಾ ಎಂ, ಗೀತಾ ಪಟ್ಟಣಶೆಟ್ಟಿ (ಅಡ್ವಾನ್ಸ್ ಡ್) ಇವರು ಉಪಸ್ಥಿತರಿದ್ದರು.

ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಮಹೇಶ್ ಎಂ,ಸಿ (ಹೆಚ್ ಡಬ್ಲ್ಯೂ ಬಿ) ಇವರು ಚಟುವಟಿಕೆಗಳನ್ನು ಸಂಘಟಿಸಿದರು.

# ಜ.24ರಿಂದ ಸಪ್ನಾ ಬುಕ್ ಹೌಸ್ನಲ್ಲಿ ಶೇ.50 ರಿಯಾಯಿತಿ

ದಾವಣಗೆರೆ: ಸಪ್ನ ಬುಕ್ ಹೌಸ್ನ 59 ನೇ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಜನವರಿ 24 ರಿಂದ ಫೆಬ್ರವರಿ 8 ರವರೆಗೂ ಗ್ರಾಹಕರಿಗೆ ಇಂಗ್ಲಿಷ್ ಹಾಗೂ ಕನ್ನಡ ಪುಸ್ತಕಗಳ ಮೇಲೆ ಶೇ. 50 ರವರೆಗೆ ರಿಯಾಯಿತಿಯನ್ನು ನೀಡುತ್ತಿದೆ.

59 ವರ್ಷಗಳ ಸಾರ್ಥಕ ಸೇವೆಯ ನೆನಪಿನಲ್ಲಿ ತನ್ನ ವಾರ್ಷಿಕೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಸಾಮಾಜಿಕ, ಶೈಕ್ಷಣಿಕವಾಗಿ ಸೇವೆ ಸಲ್ಲಿಸಿದ್ದು, ಲೇಖನ ಸಾಮಗ್ರಿಗಳು, ಫೈಲ್ಸ್, ಫೋಲ್ಡರ್ಸ್ ಡೈರೀಸ್, ನೋಟ್ ಪುಸ್ತಕಗಳು, ಸ್ಟೋರ್ 67 ಬ್ರಾಂಡಿನ ಐಟಂಗಳ ಮೇಲೆ ವಿಶೇಷ ರಿಯಾಯಿತಿಯನ್ನೂ ನೀಡುತ್ತಿದೆ.

ಬೆಂಗಳೂರು ನಗರದಲ್ಲಿ 11 ಶಾಖೆಗಳು ಹಾಗೂ ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಕಲಬುರಗಿ, ಹಾಸನ, ದಾವಣಗೆರೆ ಮತ್ತು ಹೊರ ರಾಜ್ಯದ ಕೊಯಮತ್ತೂರು ನಗರಗಳಲ್ಲಿಯೂ ಸೇರಿದಂತೆ ಒಟ್ಟು 24 ಶಾಖೆಗಳನ್ನು ಹೊಂದಿರುವ ಸಪ್ನಾ 1967ರಲ್ಲಿ ಸಂಸ್ಥೆಯ ಸುರೇಶ್ ಸಿ. ಷಾ ಅವರಿಂದ ಸ್ಥಾಪಿಸಲ್ಪಟ್ಟಿತ್ತು.

# 5 ದಿನಗಳ ಬ್ಯಾಂಕಿಂಗ್ ವ್ಯವಸ್ಥೆ....

(1ನೇ ಪುಟದಿಂದ) ಅದರ ಅನುಮೋದನೆಗಾಗಿ ಕೇಂದ್ರ ಹಣಕಾಸು ಸೇವೆಗಳ ಇಲಾಖೆಗೆ ಕಳುಹಿಸಲಾಗಿದೆ. ಆದರೆ ಒಪ್ಪಂದವಾಗಿ 2 ವರ್ಷಗಳು ಕಳೆದರೂ ಅಲ್ಲಿ ಅನಗತ್ಯವಾಗಿ ವಿಳಂಬ ಧೋರಣೆಯನ್ನು ಅನುಸರಿಸಲಾಗುತ್ತಿದೆ. ಆದ್ದರಿಂದ ಕೇಂದ್ರ ಸರಕಾರ ಈ ಕೂಡಲೇ ಮಧ್ಯಪ್ರವೇಶಿಸಿ ಬ್ಯಾಂಕ್ ಉದ್ಯೋಗಿಗಳ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಇಲ್ಲವಾದರೆ ಉದ್ದೇಶಿತ ಜನವರಿ 27 ರ ರಾಷ್ಟ್ರವ್ಯಾಪಿ ಬ್ಯಾಂಕ್ ಮುಷ್ಕರವು ಅನಿವಾರ್ಯವಾಗುತ್ತದೆ ಎಂದು ಹೇಳಿದರು.

ಪ್ರತಿಭಟನಾ ಮತ ಪ್ರದರ್ಶನದಲ್ಲಿ ದಾವಣಗೆರೆ ಜಿಲ್ಲಾ ಯುಎಫ್‌ಬಿಯು ಘಟಕದ ಸಂಚಾಲಕ ಕೆ.ರಾಘವೇಂದ್ರ ನಾಯರಿ ಮತ್ತು ಯುಎಫ್‌ಬಿಯು ನಾಯಕರಾದ ಕೆ.ವಿಶ್ವನಾಥ ಬಿಲ್ಲವ, ಪ್ರದೀಪ್ ಪಾಟೀಲ, ಎಂ.ಪಿ.ಕಿರಣ್‌ಕುಮಾರ್, ಶಮಂತ್ ಎಂ, ಸಿದ್ಧಾರ್ಥ್, ಹೆಚ್. ಎಸ್.ತಿಪ್ಪೇಸ್ವಾಮಿ, ಆರ್.ಆಂಜನೇಯ, ಪರಶುರಾಮ್, ದುರ್ಗಪ್ಪ ಸಿ, ಎಂ.ಎಂ.ಸಿದ್ದಲಿಂಗಯ್ಯ, ವಿಶ್ವಚೇತನ್, ಪ್ರಮೋದ್ ಬೀಳಗಿ, ವಿಜಯಕುಮಾರ್ ಕೆ, ಉಮಾದೇವಿ, ಮಮತಾ, ಆರ್.ಮಂಜಪ್ಪ, ಸುಮಾ ಎಂ., ಅಶ್ವಿನಿ ಟಿ, ಜ್ಞಾನೇಶ್ವರ ಮಾಳವಾಡೆ, ದೀಪಾ ಎಂ, ಸೈಯದ್ ಚಾಂದ್‌ಬಾಷಾ, ಎಂ.ಯಶವಂತ್ ಮತ್ತಿತರರು ಭಾಗವಹಿಸಿದ್ದರು.

# ಹರಿಹರ; ರಾಮ ಮಂದಿರ ನಿರ್ಮಾಣದ ದ್ವಿತೀಯ ವರ್ಷಾಚರಣೆ, ಮೆರವಣಿಗೆ



ದಾ ನಗರವಾಣಿ ಸುದ್ದಿ

ಹರಿಹರ: ಆಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಹಾಗೂ ಪ್ರತಿಷ್ಠಾಪನೆಯ ಎರಡನೇ ವರ್ಷಾಚರಣೆಯನ್ನು ದಿನೋತ್ಸವವನ್ನು ನಗರದಲ್ಲಿ ಗುರುವಾರ ರಾಮ ಭಕ್ತರು ಶ್ರದ್ಧಾ ಭಕ್ತಿಯಿಂದ ನೆರವೇರಿಸಿದರು.

ನಗರದ ಹರಿಹರೇಶ್ವರ ದೇವಸ್ಥಾನ ದಿಂದ ಅಲಂಕೃತ ವಾಹನದಲ್ಲಿ ಪ್ರಭು ಶ್ರೀರಾಮನ ಭಾವಚಿತ್ರದೊಂದಿಗೆ ಆರಂಭವಾದ ಮೆರವಣಿಗೆ ದೇವಸ್ಥಾನ ರಸ್ತೆ, ರಾಣಿಚೆನ್ನಮ್ಮ ವೃತ್ತ, ಪೇಟೆ ಆಂಜನೇಯ ದೇವಸ್ಥಾನ, ಶಿವಮೊಗ್ಗ ವೃತ್ತ, ಜೆ.ಸಿ.ಬಡಾವಣೆಯ ಮೂಲಕ ರಾಜಾರಾಂ ಕಾಲೋನಿಯ ರಾಮ ಮಂದಿರಕ್ಕೆ ಅಂತ್ಯಗೊಂಡಿತು.

ಮೆರವಣಿಗೆ ಯುದ್ದಕ್ಕೂ ಭಜನಾ ಮಂಡಳಿಯ ಮಾತೆಯರು ರಾಮ ನಾಮ ಹಾಡುತ್ತಾ ಸಾಗಿದರೆ, ಕೆಲವು ಮಾತೆಯರು ರಾಮನ ಹಾಡಿಗೆ ಕೋಲಾಟದೊಂದಿಗೆ ನೃತ್ಯ ಮಾಡುತ್ತಾ ಸಾಗಿದ್ದು ಹಾಗೂ ಶ್ರೀರಾಮ, ಸೀತೆ, ಲಕ್ಷ್ಮಣ, ಹನುಮಂತನ ವೇಷದಾರಿ ಮಕ್ಕಳು ನೋಡುಗರ ಕಣ್ಮನ ಸೆಳೆದರು.

ಈ ವೇಳೆ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಎಸ್.ಎಂ.ವೀರೇಶ್ ಹನಗವಾಡಿ, ಮುಖಂಡ ಚಂದ್ರಶೇಖರ್ ಪೂಜಾರ್, ಕೃಷ್ಣಮೂರ್ತಿ ಶ್ರೇಷ್ಠಿ, ವಕೀಲರಾದ ಮೋಹನ್ ಖಿರೋಜಿ, ಅದಿತ್ಯಾ ಮೆಹರ್ವಾಡೆ, ನಗರಸಭಾ ಮಾಜಿ ಸದಸ್ಯೆ ನಿಂಬಕ್ಕ ಚಂದಾಪೂರ, ರೂಪಾಕಾಟ್ವೆ, ಮೈಲಾರಲಿಂಗ ಸಾ ಕಾಟ್ವೆ, ಪ್ರವೀಣ್ ಜಿ.ಪವಾರ್, ಶ್ರೀಧರ್ ಮೆಹರ್ವಾಡೆ, ಸಂತೋಷಿ ಮೋಹಿತೆ, ನಂದಾ-ಎಂ.ಕಾಟ್ವೆ, ಉಷಾ.ಎನ್.ಬದಿ, ಶೋಭಾ ಭೂತೆ, ಗಂಗಾ ಮೆಹರ್ವಾಡೆ ಹಾಗೂ ಇತರರಿದ್ದರು.

# ಕುಕ್ಕುವಾಡ ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ಸಂಘ ನಿಯಮಿತಕ್ಕೆ ಸದಸ್ಯರ ಆಯ್ಕೆ



ದಾ ನಗರವಾಣಿ ಸುದ್ದಿ

ದಾವಣಗೆರೆ: ತಾಲ್ಲೂಕಿನ ಕುಕ್ಕುವಾಡದ ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ಸಂಘ ನಿಯಮಿತಕ್ಕೆ ಸದಸ್ಯರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ರಿಟರ್ನಿಂಗ್ ಅಧಿಕಾರಿಯಿಂದ ಮುಂದಿನ 05 (ಐದು) ವರ್ಷಗಳ ಅವಧಿಗೆ ಜ.24ರಂದು ನಿಗದಿಯಾಗಿದ್ದ ಆಡಳಿತ ಮಂಡಲಿ ಸ್ಥಾನಗಳಿಗಿಂತ ಕಡಿಮೆ ಸಂಖ್ಯೆ ನಾಮಪತ್ರಗಳು ಸ್ವೀಕೃತಗೊಂಡಿದ್ದು, ಸ್ಪರ್ಧೆ ಏರ್ಪಡದ ಕಾರಣ ಸದಸ್ಯರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ರುದ್ರೇಗೌಡ ಜಿ ಎಮ್ ಕುಕ್ಕುವಾಡ, ಹರ್ಷ ಜಿ ಆರ್ ಕುಕ್ಕುವಾಡ, ಚಂದ್ರಶೇಖರಪ್ಪ ಕೆ ಟಿ ಕುಕ್ಕುವಾಡ, ಶರಣಪ್ಪ ಕೆ ಹೊಸಕೋಳೇನಹಳ್ಳಿ, ಶಿವನಗೌಡ ಬಿ ಹೆಚ್ ಹೊಸಬಿಸಲೇರಿ, ಶ್ರೀಮತಿ ಶೋಭಾ ಸಿ ಮುಳ್ಳಳ್ಳಿ ಹಾವೇರಿ, ಮಹೇಂದ್ರಪ್ಪ ಪಿ ಎನ್ ಕುಕ್ಕುವಾಡ, ಕೇದಾರಮೂರ್ತಿ ಕೆ ಜಿ ಕುಕ್ಕುವಾಡ, ಯೋಗೆಂದ್ರಪ್ಪ ಕೆ ಜಿ ಹೊನ್ನಮರಡಿ ಆಂಜನೇಯನಗರ, ವಿಶ್ವನಾಥ ಜಿ ಎಮ್ ಕುಕ್ಕುವಾಡ, ಶ್ರೀಮತಿ ಗೀತಾ ಕುಕ್ಕುವಾಡ, ಸಿದ್ದರಾಮಯ್ಯ ಎಮ್ ಬಿ ಕುಕ್ಕುವಾಡ, ಲಿಂಗರಾಜ್ ಎ ಹೆಚ್ ಕುಕ್ಕುವಾಡ, ಚಂದ್ರಗೌಡ ಹೆಚ್ ದುರ್ಗಾಂಬಿಕಾ ಕ್ಯಾಂಪ್ ಮುದಹದಡಿ, ಬೆಳಕೇರಪ್ಪ ಕುಕ್ಕುವಾಡ ಇವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ಮಲೇಬೆನ್ನೂರು: ಪೊಲೀಸ್ ಠಾಣೆಗೆ ಸರ್ಕಾರಿ ಶಾಲಾ ಮಕ್ಕಳ ಭೇಟಿ



ಮಲೇಬೆನ್ನೂರು : ಪಿಡಬ್ಲ್ಯೂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಮಲೇಬೆನ್ನೂರು ಆರಕ್ಷಕ ಠಾಣಾ ವತಿಯಿಂದ ಎಎಸ್‌ಐ ಶ್ರೀನಿವಾಸ್ ಇವರು ತೆರೆದ ಮನೆ ಕಾರ್ಯಕ್ರಮದಡಿಯಲ್ಲಿ ಫೋಕ್ಸೋ ಕಾಯ್ದೆ, ಸಂಚಾರ ನಿಯಮಗಳ ಬಗ್ಗೆ ಗುರುವಾರ ಮಾಹಿತಿ ನೀಡಿದರು. ಠಾಣೆಯಲ್ಲಿ ಹೇಗೆ ಕೆಲಸ ಕಾರ್ಯಗಳು ನಡೆಯುತ್ತವೆ ಎಂದು ತಿಳಿಸುತ್ತಾ ಠಾಣೆಯ ಸಂಪೂರ್ಣ ಪರಿಚಯ ಮಾಡಿಸಿದರು.

# ಚಳ್ಳಕೆರೆ; ವೇದ ದಶಮಾನೋತ್ಸವ



ದಾ ನಗರವಾಣಿ ಸುದ್ದಿ

ಚಳ್ಳಕೆರೆ ತಾಲೂಕಿನ ಸಾಣಿಕೆರೆ ಗ್ರಾಮದ ಬಳಿಯಿರುವ ವೇದಾ ಸಮೂಹ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ನಡೆದ ವೇದ ದಶಮಾನೋತ್ಸವದ ಕಾರ್ಯಕ್ರಮದಲ್ಲಿ ಶಾಸಕ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಟಿ. ರಘುಮೂರ್ತಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ವೇದ ಸಂಸ್ಥೆಯ ಸಂಸ್ಥಾಪಕರಾದ ಡಿ.ಟಿ.ರವೀಂದ್ರ, ಸಾಹಿತಿಗಳಾದ ತಿಪ್ಪಣ್ಣ ಮರಿಕುಂಟೆ, ಸಮೂಹ ಸಂಸ್ಥೆಯ ಪದಾಧಿಕಾರಿಗಳು, ಮುಖ್ಯೋಪಾಧ್ಯಾಪರು, ಶಿಕ್ಷಕರು ಉಪಸ್ಥಿತರಿದ್ದರು.

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು, ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀ ರಾತುದಾರ ರೊಡನೆಯೇ ವ್ಯವಹ ರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು.

## ಬೇಕಾಗಿದ್ದಾರೆ

ಲೈಬ್ರರಿನ್ ಪೋಸ್ಟ್, ಪ್ಯೂನ್ ಪೋಸ್ಟ್, ಶಾಲೆ ಆಯ ಕೆಲಸಕ್ಕೆ ಹಾಗೂ ಲೇಡಿ ವಾರ್ಡನ್ ಬೇಕಾಗಿದ್ದಾರೆ.
ಆಸಕ್ತರು ಕೂಡಲೇ ಸಂಪರ್ಕಿಸಿ
**ಎಂ ಇ ಎಸ್ ಶಿಕ್ಷಣ ಸಂಸ್ಥೆ**
ಆಂಜನೇಯ ಬಡಾವಣೆ,
9ನೇ ಕ್ರಾಸ್, ದಾವಣಗೆರೆ
98804 36414

# ರಾಜ್ಯದ ಎಲ್ಲ ಶಾಲೆಗಳಲ್ಲಿ ಸಂಗೀತ ಶಿಕ್ಷಕರ ನೇಮಕಾತಿಗೆ ಆಗ್ರಹ

ದಾ ನಗರವಾಣಿ ಸುದ್ದಿ

ದಾವಣಗೆರೆ.ಜ.22: ರಾಜ್ಯ ಸರ್ಕಾರ ರಾಜ್ಯದಲ್ಲಿ ಎಲ್ಲಾ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ, ಅನುದಾನಿತ ಖಾಸಗಿ ಶಾಲೆಗಳಲ್ಲಿ, ಅನುದಾನಿತ ಪದವಿಪೂರ್ವ ಕಾಲೇಜ್‌ಗಳಲ್ಲಿ, ಮತ್ತು ಪದವಿ ಕಾಲೇಜ್‌ಗಳಲ್ಲಿ ಸಂಗೀತ ಶಿಕ್ಷಕರ ನೇಮಕಾತಿ ಮಾಡುವಂತೆ ಬಾಡಾ ಕ್ರಾಸ್ ನಲ್ಲಿರುವ ಶ್ರೀ ಗುರು ಪುಟ್ಟರಾಜ ನಗರದ ಶ್ರೀ ವೀರೇಶ್ವರ ಪುಣ್ಯಾಶ್ರಮದ ಅಖಿಲ ಕರ್ನಾಟಕ ಶ್ರೀಗುರು ಕುಮಾರೇಶ್ವರ ಅಂಧರ ಸಂಗೀತ ಕಲಾವಿದರ ಸಂಘವು ಒತ್ತಾಯಿಸಿದೆ.

ಗುರುವಾರ ಸುದ್ದಿಗೋಷ್ಟಿಯಲ್ಲಿ ಈ ಬಗ್ಗೆ ಸಂಘದ ಅಧ್ಯಕ್ಷ ಶ್ರೀಶೈಲ ಮಾತನಾಡಿ, ಕಳೆದ 15 ವರ್ಷಗಳಿಂದ ಹಲವು ಸಂಗೀತ ಪದವೀಧರರು ಸಂಗೀತದಲ್ಲಿ ಸರಕಾರ ನಡೆಸುವ ವಿಶೇಷ ಸಂಗೀತ ಪರೀಕ್ಷೆಯಲ್ಲಿ ಸೀನಿಯರ್ ಗ್ರೇಡ್, ವಿದ್ವತ್, ವಿಶಾರದ, ಸಂಗೀತ ಅಲಂಕಾರ, ಮತ್ತು ವಿಶ್ವವಿದ್ಯಾಲಯಗಳು ನಡೆಸುವ ಬಿ.ಎ. ಮ್ಯೂಜಿಕ್, ಎಮ್.ಎ. ಮ್ಯೂಜಿಕ್ ಹೀಗೆ ಹಲವು ಪದವಿಗಳನ್ನು ಮುಗಿಸಿಕೊಂಡು ಸರಕಾರಿ ನೌಕರಿ ಇಲ್ಲದೆ ಮತ್ತು ಖಾಸಗಿ ಶಾಲೆಗಳಲ್ಲಿ ಕೆಲಸವಿಲ್ಲದೆ ನಿರುದ್ಯೋಗಿಗಳಾಗಿ ಕುಳಿತಿದ್ದಾರೆ ಎಂದು ತಿಳಿಸಿದರು.

ವಯಸ್ಸಿನ ಅಂತರ ಮುಗಿಯುತ್ತ ಬಂದಿದೆ. ಕೆಲವರಿಗಂತೂ ವಯಸ್ಸೇ ಮುಗಿದಿರುತ್ತದೆ ಹಿಂದೆ 2010ರಲ್ಲಿ ಸಂಗೀತ ಶಿಕ್ಷಕರ ನೇಮಕಾತಿ ನಡೆದಿತ್ತು. 2010 ನಂತರ ಇಲ್ಲಿಯವರೆಗೂ ಅಂದರೆ 15 ವರ್ಷಗಳಾದರು ಸಂಗೀತ ಶಿಕ್ಷಕರ ನೇಮಕಾತಿ ಆಗಿರುವುದಿಲ್ಲ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2011 ರಲ್ಲಿ ನೇಮಕಾತಿ ಪ್ರಕ್ರಿಯೆ ನಡೆದಿತ್ತು. ತದನಂತರ ಇಲ್ಲಿಯವರೆಗೂ ಯಾವುದೇ ನೇಮಕಾತಿ ನಡೆದಿಲ್ಲ ಎಂದು ಮಾಹಿತಿ ನೀಡಿದರು.

ಆದ ಕಾರಣ ಸರ್ಕಾರ ಆದಷ್ಟು ಬೇಗ ಎಲ್ಲಾ ಶಾಲೆಗಳಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ, ಅಂಗ ಸಂಸ್ಥೆಗಳಲ್ಲಿ ಸಂಗೀತ ಶಿಕ್ಷಕರನ್ನು ನೇಮಕ ಮಾಡಿ ನಿರುದ್ಯೋಗಿ ಸಂಗೀತ ಪದವೀಧರರಿಗೆ ಕೆಲಸ ನೀಡಬೇಕು ಮತ್ತು ಸಂಗೀತ ಕಲೆ ಉಳಿಸಿ ಬೆಳೆಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಂಜುನಾಥ ಸ್ವಾಮಿ, ಯಲಗುರೇಶ, ಗಣೇಶ್, ಮಹಾಂತೇಶ್, ಶೇಖರ್, ಪ್ರಭುಶಂಕರ್ ಇತರರು ಇದ್ದರು.